ವಿಜಯಪುರ | ಸಂಪುಟ 04 | ಸಂಚಿಕೆ 172 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203


ರವಿವಾರ, ಆಗಸ್ಟ್ 30, 2026



"ವಿಜಯಪುರದ ಹೃದಯ ಭಾಗದಲ್ಲಿರುವ ಐತಿಹಾಸಿಕ ಗಾಂಧಿ ವೃತ್ತವನ್ನು ನವೀಕರಿಸುವ ಅಗತ್ಯವಿದೆ. ಬಾಪೂಜಿ ಸ್ಮರಣೆಯನ್ನು ಮತ್ತಷ್ಟು ಅರ್ಥಪೂರ್ಣಗೊಳಿಸುವ ನಿಟ್ಟಿನಲ್ಲಿ ಇಡೀ ಗಾಂಧಿ ವೃತ್ತವನ್ನು ನವೀಕರಿಸಿ, ಗಾಂಧೀಜಿಯ ಭವ್ಯ ಪುತ್ಥಳಿ ಪ್ರತಿಷ್ಠಾಪಿಸಲು ನಿರ್ಧರಿಸಲಾಗಿದೆ."

■ ಎಂ. ಬಿ. ಪಾಟೀಲ
ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರು

## ಪತ್ರಕರ್ತನಿಗೆ ಜೀವಬೆದರಿಕೆ ಹಾಕಿದ ದುಷ್ಕರ್ಮಿಗಳ ನಡೆಗೆ ಖಂಡನೆ




### ಇಂಡಿಯಲ್ಲಿ ವಿವಿಧ ಸಂಘಟನೆಗಳ ಒಕ್ಕೂಟಗಳ ನೇತೃತ್ವದಲ್ಲಿ ಸರ್ಕಾರಕ್ಕೆ ಮನವಿ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಹಿರಿಯ ಪತ್ರಕರ್ತ ಪರಶುರಾಮ ಶಿವಶರಣ ಅವರ ಮನೆಗೆ ನುಗ್ಗಿ ದುಷ್ಕರ್ಮಿಗಳು ಕುಂಟುಂಬಸ್ಥರಿಗೆ ಧಮ್ಕಿ ಹಾಕಿದ ಪ್ರಕರಣವನ್ನು ಖಂಡಿಸಿ, ವಿವಿಧ ಸಂಘಟನೆಗಳ ಒಕ್ಕೂಟಗಳ ನೇತೃತ್ವದಲ್ಲಿ ಶನಿವಾರ ಕಂದಾಯ ಉಪ ವಿಭಾಗಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಕರವೇ ತಾಲೂಕಾಧ್ಯಕ್ಷ ಬಾಳು ಮುಳಜಿ, ಜೆಡಿಎಸ್ ಮುಖಂಡ ಡಾ.ರಮೇಶ್ ರಾಠೋಡ, ಬಿಜೆಪಿ ಮುಖಂಡ ಅದೃಶ್ಯಪ್ಪ ವಾಲಿ, ರೈತ ಸಂಘದ ಜಿಲ್ಲಾಧ್ಯಕ್ಷ ಎಸ್. ಬಿ. ಕೆಂಬೋಗಿ, ಪತ್ರಕರ್ತ ಶರಣು ಕಾಂಬಳೆ ಮಾತನಾಡಿ, ಸತ್ಯವನ್ನು ಸಮಾಜಕ್ಕೆ ತಿಳಿಸುವ ಪತ್ರಕರ್ತರ ಧ್ವನಿ ಅಡಗಿಸುವ ಪ್ರಯತ್ನ ನಡೆಯುತ್ತಿದೆ. ಇಂತಹ ಕಿಡಿಗೇಡಿಗಳ ವಿರುದ್ಧ ಸರ್ಕಾರ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಅನ್ನ ಭಾಗ್ಯ ಅಕ್ಕಿ ಕಳ್ಳಸಾಗಣೆ ದಂಧೆಯ ಹಿಂದೆ ದೊಡ್ಡ ಜಾಲವೇ ಇರುವ ಶಂಕೆಯಿದೆ. ಈ ಪ್ರಕರಣದ ಸಮಗ್ರ ತನಿಖೆಯಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದರು.

ಮುಕ್ತ ಮತ್ತು ನಿರ್ಭೀತ ಪತ್ರಿಕೋದ್ಯಮಕ್ಕೆ ಧಕ್ಕೆ ತರುವ ಶಕ್ತಿಗಳನ್ನು ಒಟ್ಟಾಗಿ ಎದುರಿಸಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಪ್ರಕಾಶ ಬಿರಾದಾರ, ಸಿದ್ದು ಡಂಗಾ, ಶಿವಾನಂದ ಕಲ್ಲೊಳ್ಳಿ, ಸಂಜೀವ ದಶವಂತ, ಲಕ್ಷ್ಮಣ ಲಾಳಸಂಗಿ, ಅಂಬುರಾಯ ಕವಟಗಿ, ರೇವಣ್ಣ ಹತ್ತಳ್ಳಿ, ದುಂಡು ಬಿರಾದಾರ, ಬಿ.ಡಿ. ಇನಾಮದಾರ, ವಿಲಾಸ ಉಮರ್ಜಿ, ಮಲ್ಲು ಗುಡ್ಲ, ಮಹೇಶ ಹೂಗಾರ, ವಿಠೋಬಾ ಗುಡ್ಲ, ಶಾಂತಯ್ಯ ಮಠ, ಮಲ್ಲು ಬಿರಾದಾರ,

ಪತ್ರಕರ್ತರಾದ ಉಮೇಶ ಬಳಬಟ್ಟಿ, ಯಲಗೊಂಡ ಬೇವನೂರ, ಖಾಜು ಸಿಂಗೆಗೋಳ, ಶಂಕರ ಜಮಾದಾರ, ನಿಂಗನಗೌಡ ಬಿರಾದಾರ, ಸಚಿನ ಇಂಡಿ, ಆನಂದ ಗಣಾಚಾರಿ, ಮಲ್ಲಿಕಾರ್ಜುನ ಹಾವಿನಾಳಮಠ, ತುಕಾರಾಮ ಪವಾರ, ಅರವಿಂದ ಕಾಂಬಳೆ, ಆನಂದ ಅಗರಖೇಡ, ಫಯಾಜ ಬಾಗವಾನ, ಸಿದ್ದು ಹತ್ತಳ್ಳಿ, ಅಲ್ಲಾಭಕ್ಷ ಗೋರೆ, ಲಾಲಸಿಂಗ ರಾಠೋಡ ಸೇರಿದಂತೆ ಇನ್ನಿತರರು ಇದ್ದರು.

# ಪಿಒಪಿ ಗಣೇಶ ಬದಲು ಪರಿಸರ ಸ್ನೇಹಿ ಗಣೇಶ ಪ್ರತಿಷ್ಠಾಪಿಸಿ

### ಗಣೇಶ ಹಬ್ಬ ಆಚರಣೆಯ ಪೂರ್ವಭಾವಿ ಸಭೆಯಲ್ಲಿ ವಿಜಯಪುರ ಜಿಲ್ಲಾಧಿಕಾರಿ ಡಾ. ಆನಂದ ಕೆ. ಸೂಚನೆ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ಜಿಲ್ಲೆಯಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ ಮತ್ತು ರಾಸಾಯನಿಕ ಬಣ್ಣ ಲೇಪಿತ ಗಣೇಶ ಮೂರ್ತಿಗಳ ತಯಾರಿಕೆ, ಸಂಗ್ರಹಣೆ, ಮಾರಾಟ ಹಾಗೂ ವಿಸರ್ಜನೆಯನ್ನು ಸರ್ಕಾರದ ಆದೇಶದ ಮೇರೆಗೆ ನಿಷೇಧಿಸಲಾಗಿದ್ದು, ಪರಿಸರ ಸ್ನೇಹಿ ಗಣೇಶೋತ್ಸವ ಆಚರಿಸಲು ನಿಗಾವಹಿಸಲು ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ವಿವಿಧ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳೊಂದಿಗೆ ಶನಿವಾರ ನಡೆದ ಗಣೇಶ ಹಬ್ಬ ಆಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಈ ಸೂಚನೆ ನೀಡಿದರು.

ಪರಿಸರ ಸ್ನೇಹಿ ಮಣ್ಣಿನ ಗಣಪತಿ ಮೂರ್ತಿಗಳ ತಯಾರಿಕೆ ಮತ್ತು ಮಾರಾಟಕ್ಕೆ ಅನುಮತಿಸಿ, ಎಲ್ಲಾ ಸ್ಥಳೀಯ ಸಂಸ್ಥೆಗಳು ಮೂರ್ತಿ ತಯಾರಕರು ಹಾಗೂ ಗಣೇಶ ಮಹಾ ಮಂಡಳಿಗಳೊಂದಿಗೆ ಸಭೆ ನಡೆಸಿ ಈ ಬಗ್ಗೆ ಕಟ್ಟುನಿಟ್ಟಿನ ಮಾಹಿತಿ ನೀಡಬೇಕು. ಸಾರ್ವಜನಿಕರಲ್ಲಿ ಪರಿಸರ ಸ್ನೇಹಿ ಹಬ್ಬದ ಆಚರಣೆ ಕುರಿತು ಅರಿವು ಮೂಡಿಸಿ ಎಂದರು.

ಕೃತಕ ಹೊಂಡಗಳಲ್ಲಿ ವಿಸರ್ಜನೆ: ನೈಸರ್ಗಿಕ ಜಲಮೂಲಗಳು ಕಲುಷಿತಗೊಳ್ಳದಂತೆ ಸೂಕ್ತ ಪ್ರದೇಶಗಳಲ್ಲಿ ಕೃತಕ ಕೆರೆ ಅಥವಾ ಹೊಂಡಗಳನ್ನು ನಿರ್ಮಿಸಿ ಮೂರ್ತಿಗಳನ್ನು ವಿಸರ್ಜಿಸಲು ವ್ಯವಸ್ಥೆ ಮಾಡಲಾಗುವುದು. ಹಾಗಾಗಿ ಸಾರ್ವಜನಿಕರು ಗಣೇಶ ಮೂರ್ತಿಗಳನ್ನು ಕೃತಕ ಹೊಂಡಗಳಲ್ಲೇ ವಿಸರ್ಜಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದರು. ಜೊತೆಗೆ ಹೂವು, ವಸ್ತ್ರ, ಪ್ಲಾಸ್ಟಿಕ್ ಹಾರ ಮುಂತಾದ ಅಲಂಕಾರಿಕ ವಸ್ತುಗಳ ತ್ಯಾಜ್ಯಗಳನ್ನು ಮೂರ್ತಿಗಳ ಜೊತೆ ವಿಸರ್ಜಿಸಲು ಅವಕಾಶವಿರುವುದಿಲ್ಲ ಎಂಬುದನ್ನು ಗಣೇಶ ಮಹಾಮಂಡಳಿಯವರಿಗೆ ತಿಳಿವಳಿಕೆ ನೀಡಬೇಕು ಎಂದರು.

ಪಿ.ಒ.ಪಿ ಮೂರ್ತಿ ತಯಾರಿಸುವ ಹಾಗೂ ಮಾರಾಟ ಮಾಡುವ ವ್ಯಕ್ತಿ ಅಥವಾ ಸಂಸ್ಥೆಗಳಿಗೆ ವ್ಯಾಪಾರ ಲೈಸೆನ್ಸ್ ನೀಡಲಾಗುವುದಿಲ್ಲ. ಈಗಾಗಲೇ ನೀಡಿದ್ದರೆ ಅದನ್ನು ತಕ್ಷಣ ಹಿಂಪಡೆಯಬೇಕು ಎಂದೂ ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚಿಸಿದರು.ಪಿಒಪಿ ಗಣೇಶ ಮೂರ್ತಿಗಳ ಮಾರಾಟ ಹಾಗೂ ಹೊರರಾಜ್ಯಗಳಿಂದ ಅವುಗಳ ಪೂರೈಕೆಯನ್ನು ನಿಷೇಧಿಸಲಾಗಿದೆ. ಹೊರ ರಾಜ್ಯಗಳಿಂದ ಕರ್ನಾಟಕಕ್ಕೆ ಬರುವ ಪಿ.ಒ.ಪಿ ಮೂರ್ತಿಗಳನ್ನು ತಡೆಯಲು ಗಡಿ ಭಾಗದ ಎಲ್ಲಾ ಚೆಕ್ ಪೋಸ್ಟ್ ಗಳಲ್ಲಿ ನಿಗಾವಹಿಸಿ ಎಂದರು.

ಪರಿಸರ ಸ್ನೇಹಿ ಮಣ್ಣಿನ ಗಣಪತಿ ಮೂರ್ತಿಗಳಬಳಕೆಗೆಸಂಘ–ಸಂಸ್ಥೆಗಳೊಂದಿಗೆ ಸಭೆ ನಡೆಸಿ ಜಾಗೃತಿ ಮೂಡಿಸಬೇಕು. ಹಾಗಾಗಿ ಗಣೇಶ ಪ್ರತಿಷ್ಠಾಪನೆಯಿಂದ ವಿಸರ್ಜನೆಯಾಗುವವರೆಗೂ ಸರ್ಕಾರದ ನಿಯಮಾನುಸಾರ ಪರಿಸರ ಸ್ನೇಹಿ ಗಣೇಶೋತ್ಸವ ಆಚರಿಸಲಿಕ್ಕೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದರು.

ಗಣೇಶ ವಿಸರ್ಜನಾ ಸ್ಥಳದಲ್ಲಿ ಸಿಸಿಟಿವಿ ಕ್ಯಾಮರಾ ವ್ಯವಸ್ಥೆ ಮಾಡಬೇಕು ಎಂದು ಪಟ್ಟಣ ಪಂಚಾಯತಿ ಹಾಗೂ ಪುರಸಭೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಧ್ವನಿವರ್ಧಕ ಬಳಕೆ ಬಗ್ಗೆಯೂ ಅಧಿಕಾರಿಗಳು ತ ಗಮನ ಹರಿಸಬೇಕು ಎಂದ ಜಿಲ್ಲಾಧಿಕಾರಿಗಳು, ಸರ್ಕಾರ ಮತ್ತು ಪೊಲೀಸ್ ಇಲಾಖೆಯ ನಿಯಮಗಳಂತೆ ಧ್ವನಿವರ್ಧಕಗಳ ಬಳಕೆಗೆ ನಿಗದಿಪಡಿಸಿದ ಸಮಯ ಹಾಗೂ ಡೆಸಿಬಲ್ ನಿಯಮಗಳನ್ನು ಪಾಲಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬದ್ರುದ್ದಿನ್ ಸೌದಾಗರ್, ಮಹಾನಗರ ಪಾಲಿಕೆ ಆಯುಕ್ತ ವಿಜಯಕುಮಾರ ಮೆಕ್ಕಳಕಿ ಸೇರಿದಂತೆ ಜಿಲ್ಲೆಯ ವಿವಿಧ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ಉಪಸ್ಥಿತರಿದ್ದರು.

### ಹಸಿರು ಪಟಾಕಿಗಳನ್ನು ಮಾತ್ರ ಮಾರಾಟ ಮಾಡಲು ಅವಕಾಶ

ಪಟಾಕಿ ಮಾರಾಟಕ್ಕೆ ನಿಗದಿಪಡಿಸಿದ ಸ್ಥಳಗಳಲ್ಲಿ ಸುರಕ್ಷತಾ ನಿಯಮ ಪಾಲಿಸಿ ಲೈಸೆನ್ಸ್ ನೀಡಲಾಗುವುದು. ಹಬ್ಬದಲ್ಲಿ ಹಸಿರು ಪಟಾಕಿಗಳನ್ನು ಮಾತ್ರ ಮಾರಾಟ ಮಾಡಲು ಅವಕಾಶವಿದೆ ಎಂದು ಜಿಲ್ಲಾಧಿಕಾರಿ ಅಧಿಕಾರಿಗಳಿಗೆ ಸೂಚಿಸಿದರು.
ಗಣೇಶ ಮೆರವಣಿಗೆ ಮಾರ್ಗದಲ್ಲಿ ವಿದ್ಯುತ್ ಕಂಬ ಸೇರಿದಂತೆ ಅಗತ್ಯ ಕ್ರಮ ವಹಿಸಬೇಕು. ಮೆರವಣಿಗೆ ಸಾಗುವ ಮಾರ್ಗಗಳಲ್ಲಿನ ವಿದ್ಯುತ್ ಕಂಬಗಳ ಬಗ್ಗೆ ಹೆಸ್ಕಾಂ ಅಧಿಕಾರಿಗಳು ನಿಗಾವಹಿಸಬೇಕು. ಗಣೇಶ ಮೂರ್ತಿಗಳ ಎತ್ತರಕ್ಕೆ ತಕ್ಕಂತೆ ವಿದ್ಯುತ್ ಲೈನ್ ಗಳ ಸುರಕ್ಷತೆ ಖಾತ್ರಿಪಡಿಸಿಕೊಂಡು, ಯಾವುದೇ ವಿದ್ಯುತ್ ಅವಘಡ ಸಂಭವಿಸದಂತೆ ನೋಡಿಕೊಳ್ಳಬೇಕು ಎಂದೂ ಸೂಚಿಸಿದರು.

## ಇಂದು ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಸ್ವಾಮೀಜಿ ವೃಕ್ಷೋದ್ಯಾನ ಲೋಕಾರ್ಪಣೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲೆಯ ಇಂಡಿ ತಾಲೂಕಿನ ಸಾವಳಸಂಗ ಗ್ರಾಮದಲ್ಲಿ ಸಾಮಾಜಿಕ ಅರಣ್ಯ ವಿಭಾಗ,ವಿಜಯಪುರ ಹಾಗೂ ಸಾಮಾಜಿಕ ಅರಣ್ಯ ವಲಯ, ಇಂಡಿ ಇವರ ಸಹಯೋಗದಲ್ಲಿ ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಸ್ವಾಮೀಜಿ ವೃಕ್ಷೋದ್ಯಾನದ ಲೋಕಾರ್ಪಣೆ ಸಮಾರಂಭ ಆ.30ರಂದು ಭಾನುವಾರ ಬೆಳಗ್ಗೆ 10ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರಾದ ರಾಮಲಿಂಗಾ ರೆಡ್ಡಿ ಅವರು ಅವರು ಉದ್ಘಾಟಿಸುವರು. ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ.ಪಾಟೀಲ ಅವರು ಘನ ಉಪಸ್ಥಿತಿ ವಹಿಸಲಿದ್ದಾರೆ.

ಇಂಡಿ ಮತಕ್ಷೇತ್ರದ ಶಾಸಕರಾದ ಯಶವಂತರಾಯಗೌಡ ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶಾಸಕರು, ಸಂಸದರು ಸೇರಿದಂತೆ ಜಿಲ್ಲೆಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಪ್ರಕಟಣೆ ತಿಳಿಸಿದೆ.

# ಬೇಕಾಬಿಟ್ಟಿಯಾಗಿ ಬರಗಾಲ ಪರಿಸ್ಥಿತಿ ನಿಭಾಯಿಸುತ್ತಿರುವ ಸರ್ಕಾರ

### ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ, ಮಾಜಿ ಶಾಸಕ ಎ.ಎಸ್. ಪಾಟೀಲ ನಡಹಳ್ಳಿ ಅಸಮಾಧಾನ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಕೇವಲ ಫೋಟೋ ಶೂಟ್ ಸೀಮಿತವಾದಂತೆ ಜಿಲ್ಲಾ ಉಸ್ತುವಾರಿ ಸಚಿವರು ಬರ ವೀಕ್ಷಣೆ ಮಾಡಿದ್ದಾರೆ, ಸಭೆಗಳನ್ನು ಸಹ ಪರಿಣಾಮಕಾರಿಯಾಗಿ ನಡೆಸಿಲ್ಲ, ಒಂದರ್ಥದಲ್ಲಿ ಸರ್ಕಾರ ಬರಗಾಲ ಪರಿಸ್ಥಿತಿಯನ್ನು ಬೇಕಾಬಿಟ್ಟಿಯಾಗಿ ನಿಭಾಯಿಸುತ್ತಿದೆ ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ, ಮಾಜಿ ಶಾಸಕ ಎ.ಎಸ್. ಪಾಟೀಲ ನಡಹಳ್ಳಿ ಅಸಮಾಧಾನ ಹೊರಹಾಕಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂದು ರಾಜ್ಯ ಸರ್ಕಾರ ಬೇಜವಾಬ್ದಾರಿ ಹಾಗೂ ನಿಷ್ಕಾಳಜಿತನದಿಂದ ಸರಿಯಾದ ಮಾಹಿತಿ ಸಂಗ್ರಹಿಸದೇ ಬೇಕಾಬಿಟ್ಟಿಯಾಗಿ

ಹಾಗೂ ಬರಗಾಲದ ಮಾನದಂಡಗಳನ್ನು ಸಹ ಸರಿಯಾಗಿ ಪರಿಗಣಿಸದೇ ಇಂದು ಕೇವಲ 101 ತಾಲೂಕುಗಳನ್ನು ಬರ ಪೀಡಿತ ತಾಲೂಕು ಎಂದು ಘೋಷಣೆ ಮಾಡಿದೆ ಎಂದರು.

190 ತಾಲೂಕುಗಳಲ್ಲಿ ಮಳೆ ಕೊರತೆಯಾಗಿರುವುದನ್ನು ಸ್ವತಃ ಕಂದಾಯ ಸಚಿವರೇ ಒಪ್ಪಿದ್ದಾರೆ, ಆದರೆ ಬರಗಾಲ ಘೋಷಣೆ ಮಾತ್ರ 101 ತಾಲೂಕುಗಳಿಗೆ ಮಾಡಿರುವುದು ನ್ಯಾಯವೇ ಎಂದು ಪ್ರಶ್ನಿಸಿದರು.

ಉತ್ತರ ಕರ್ನಾಟಕ ಭಾಗದಲ್ಲಿ 91 ತಾಲೂಕುಗಳು ಭೀಕರ ಪರಿಸ್ಥಿತಿ ಎದುರಿಸಿದರೂ ಕೇವಲ 27 ತಾಲೂಕುಗಳನ್ನು ಮಾತ್ರ ಬರಪೀಡಿತ ಎಂದು ಘೋಷಣೆ ಮಾಡಿರುವುದು ಎಷ್ಟು ಸರಿ, ಬರಗಾಲ ಪ್ರದೇಶ ಎಲ್ಲಿದೆ ಎನ್ನುವುದು ಸರ್ಕಾರಕ್ಕೆ ಗೊತ್ತೇ ಇಲ್ಲವೇ? ಎಂದರು.

ಮಂತ್ರಿಗಳು ಪ್ರತಿನಿಧಿಸುವ ಜಿಲ್ಲೆಗಳಿಗೆ ಹೆಚ್ಚು ಒತ್ತು ನೀಡಲಾಗಿದೆ, ಅವರು ಬಂದ ಸಂದರ್ಭದಲ್ಲಿ ಕೊರಳಿ ಪಟ್ಟಿ ಹಿಡಿದು ಕೇಳುತ್ತಾರೆ ಎಂಬ ಭಯದಿಂದ ತಮ್ಮ ಪ್ರದೇಶ ಬರ ಘೋಷಣೆ ಮಾಡಿದ್ದಾರೆಯೇ ಎಂದು ಪ್ರಶ್ನಿಸಿದರು.

ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರ ಬರ ವೀಕ್ಷಣೆ ಕೇವಲ ಫೋಟೋ ಶೂಟ್ ಗೆ ಸೀಮಿತವಾಗಿದೆ, ದೇವರಹಿಪ್ಪರಗಿ, ಮುದ್ದೇಬಿಹಾಳ, ಬಸವನ ಬಾಗೇವಾಡಿಗೆ ಭೇಟಿ ನೀಡಿಲ್ಲ, ಒಂದೇ ಒಂದು ಸಭೆ ನಡೆಸಿಲ್ಲ ಎಂದರು.

ಅತ್ತ ಅಧಿಕಾರಿಗಳು ಭೇಟಿ ನೀಡಿಲ್ಲ, ಈ ಎಲ್ಲ ಅಂಶಗಳಿಂದ ಬರಗಾಲ ಪರಿಸ್ಥಿತಿಯನ್ನು ಬೇಕಾಬಿಟ್ಟಿಯಾಗಿ ನಿರ್ವಹಣೆ ಮಾಡುತ್ತಿದೆ ಎಂದು ದೂರಿದರು.

ಹಳೆ ಮೈಸೂರು ಭಾಗದ ಎಲ್ಲ ಜಿಲ್ಲೆಗಳನ್ನು ಬರಪೀಡಿತ ಜಿಲ್ಲೆ ಎಂದು ಘೋಷಣೆ ಮೀಸಲಾಗಿದೆ, ಆದರೆ ಉತ್ತರ ಕರ್ನಾಟಕ ಬಹುತೇಕ ಜಿಲ್ಲೆಗಳಲ್ಲಿ ಒಂದೇ ಒಂದು ತಾಲೂಕುಗಳನ್ನು ಬರಪೀಡಿತ ತಾಲೂಕು ಎಂದು ಘೋಷಣೆ ಮಾಡಿಲ್ಲ ಎಂದರು.

ಮಾಜಿ ಶಾಸಕ ಸೋಮನಗೌಡ ಪಾಟೀಲ ಸಾಸನೂರ, ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಸಾವಯವ ಬೀಜ ಪ್ರಮಾಣನ ನಿಗಮದ ಮಾಜಿ ಅಧ್ಯಕ್ಷ ವಿಜುಗೌಡ ಪಾಟೀಲ, ಎಸ್.ಸಿ. ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಉಮೇಶ ಕಾರಜೋಳ, ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಬಾಲರಾಜ್ ರೆಡ್ಡಿ, ಶಿಲ್ಪಾ ಕುದರಗೊಂಡ, ಮಾಧ್ಯಮ ಪ್ರಮುಖ ವಿಜಯ ಜೋಶಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

**ಕೇಂದ್ರದ ಮೇಲೆ ಗೂಬೆ ಕೂರಿಸುವುದೇ ಕೆಲಸ**

ಕೇವಲ ಮಾತೆತ್ತಿದರೆ ಸಾಕು ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸಿ ನಿಯಮಾವಳಿ ಬದಲಾವಣೆ ಮಾಡಿ ಎಂದು ಕಾಂಗ್ರೆಸ್ ನಾಯಕರು ದೂರುತ್ತಾರೆ, ಈ ಹಿಂದೆ ಲೋಕಸಭೆ ಚುನಾವಣೆ ಮುಂಚೆ ರಾಜ್ಯ ಸರ್ಕಾರ ರೈತರಿಗೆ 4047 ಕೋಟಿ ರೂ. ಪರಿಹಾರ ನೀಡಿದ್ದು, ಅದರಲ್ಲಿ ಕೇಂದ್ರ ಸರ್ಕಾರ ನೀಡಿದ್ದು

3454 ಕೋಟಿ ರೂ., ಹಾಗಾದರೆ ರಾಜ್ಯ ಸರ್ಕಾರ ನೀಡಿದ್ದು ಕೇವಲ 500 ಕೋಟಿ ರೂ. ಮಾತ್ರ ಎಂದು ನಡಹಳ್ಳಿ ದೂರಿದರು.

### ಪ್ರತಿ ಎಕರೆಗೆ 50 ಸಾವಿರ ರೂ. ಪರಿಹಾರ ಘೋಷಿಸಿ

ಪ್ರಥಮ ಹಂತವಾಗಿ ಪ್ರತಿ ಎಕರೆಗೆ 25 ಸಾವಿರ ರೂ. ಹಾಗೂ ಎರಡನೇಯ ಹಂತದಲ್ಲಿ 25 ಸಾವಿರ ರೂ. ಕೂಡಲೇ ಬಿಡುಗಡೆ ಮಾಡಬೇಕು ಎಂದು ನಡಹಳ್ಳಿ ಒತ್ತಾಯಿಸಿದರು.
ರಾಜ್ಯ ಸರ್ಕಾರ ರೈತರ ನೆರವಿಗೆ ಧಾವಿಸಬೇಕಿದೆ, ಸಾಲದ ಸುಳಿಯಲ್ಲಿ ಸಿಲುಕಿ ರೈತ ಒದ್ದಾಡುತ್ತಿದ್ದಾನೆ.
ಕೇಂದ್ರದಿಂದ ಹೆಚ್ಚಿನ ಅನುದಾನ ತರುವ ನಿಟ್ಟಿನಲ್ಲಿ ನಾವು ಸಂಪೂರ್ಣ ಸಹಕಾರ ನೀಡಲು ಸಿದ್ಧ, ಮುಖ್ಯಮಂತ್ರಿಗಳು ಯಾವಾಗ ಕರೆಯುತ್ತಾರೆ ಆಗ ನಾವು ಅವರ ಜೊತೆ ನಿಯೋಗದೊಂದಿಗೆ ಹೋಗಲು ನಾವು ಸಿದ್ದ ಎಂದರು.

## ಗಾಂಧಿ ವೃತ್ತ ನವೀಕರಣಕ್ಕೆ ಕ್ರಮ: ಅ.2 ರಂದು ಶಂಕುಸ್ಥಾಪನೆ



### ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿಕೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಗಾಂಧಿ ವೃತ್ತ ನವೀಕರಣಕ್ಕೆ ಕ್ರಮ ಕೈಗೊಳ್ಳಲಾಗಿದ್ದು, ಅಕ್ಟೋಬರ್ 2 ರಂದು ಗಾಂಧಿ ಜಯಂತಿ ದಿನ ಶಂಕುಸ್ಥಾಪನೆ ನೆರವೇರಿಸಲಾಗುವುದು ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ತಿಳಿಸಿದ್ದಾರೆ.

ಶನಿವಾರ ನಗರದಲ್ಲಿರುವ ತಮ್ಮ ಗೃಹಕಚೇರಿಯಲ್ಲಿ ಸಭೆ ನಡೆಸಿದ ಸಚಿವರು ಕಾಮಗಾರಿಯ ವಿನ್ಯಾಸ, ರೂಪುರೇಷೆ ಮತ್ತು ಕೈಗೊಳ್ಳಬೇಕಾದ ಮುಂದಿನ ಕ್ರಮಗಳ ಕುರಿತು ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ನಗರದ ಹೃದಯ ಭಾಗದಲ್ಲಿರುವ ಐತಿಹಾಸಿಕ ಗಾಂಧಿ ವೃತ್ತವು ಹಲವು ವರ್ಷಗಳಿಂದ ಹಳೆಯ ರೂಪದಲ್ಲಿಯೇ ಇದೆ. ಇಲ್ಲಿರುವ ಮಹಾತ್ಮ ಗಾಂಧೀಜಿಯವರ ಪ್ರತಿಮೆಯೂ ಚಿಕ್ಕದಾಗಿದ್ದು, ಬೆಳೆಯುತ್ತಿರುವ ವಿಜಯಪುರದ ಸೌಂದರ್ಯಕ್ಕೆ ತಕ್ಕಂತೆ ಈ ವೃತ್ತವನ್ನು ನವೀಕರಿಸುವ ಅಗತ್ಯವಿದೆ. ಸತ್ಯ, ಅಹಿಂಸೆ, ಶಾಂತಿ ಹಾಗೂ ಸಮಾನತೆಯ ಸಂದೇಶವನ್ನು ಜಗತ್ತಿಗೆ ಸಾರಿದ ಬಾಪೂಜಿ ಅವರ ಆದರ್ಶಗಳು ಎಂದೆಂದಿಗೂ ಪ್ರಸ್ತುತ. ಅವರ ಸ್ಮರಣೆಯನ್ನು ಮತ್ತಷ್ಟು ಅರ್ಥಪೂರ್ಣಗೊಳಿಸುವ ಮತ್ತು ನಗರದ ಸೌಂದರ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಇಡೀ ಗಾಂಧಿ ವೃತ್ತವನ್ನು ನವೀಕರಿಸಿ, ಭವ್ಯವಾದ ಗಾಂಧೀಜಿ ಪುತ್ಥಳಿಯನ್ನು ಪ್ರತಿಷ್ಠಾಪಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಗಾಂಧೀಜಿ ವೃತ್ತವನ್ನು ಅಂದ ಚಂದಗೊಳಿಸಿ, ಭವ್ಯವಾದಗಾಂಧಿಪ್ರತಿಮೆಯನ್ನುಇಲ್ಲಿಪ್ರತಿಷ್ಠಾಪಿಸಲು ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಮತ್ತು ಆಯುಕ್ತರಿಗೆ ಸಚಿವರು ಸೂಚನೆ ನೀಡಿದ್ದರು. ಅದರಂತೆ, ಪ್ರಖ್ಯಾತ ವಾಸ್ತುಶಿಲ್ಪಿ ಆನಂದ ಕುಸೂರ ಅವರು ಸಿದ್ಧಪಡಿಸಿರುವ ವಿನ್ಯಾಸವನ್ನು ಸಚಿವರಿಗೆ ತೋರಿಸಿದರು. ಅದನ್ನು ಪರಿಶೀಲಿಸಿದ ಸಚಿವರು ಅಗತ್ಯ ಸಲಹೆ–ಸೂಚನೆಗಳನ್ನು ನೀಡಿದರು. ಅಲ್ಲದೇ, ಕಾಮಗಾರಿಯನ್ನು ತ್ವರಿತವಾಗಿ ಕೈಗೆತ್ತಿಕೊಂಡು, ಮುಂಬರುವ ಗಾಂಧಿ ಜಯಂತಿಯಂದೇ ವೃತ್ತದ ನವೀಕರಣಕ್ಕೆ ಶಂಕುಸ್ಥಾಪನೆ ನೆರವೇರಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಭೆಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗದ ಅಧ್ಯಕ್ಷ ಬಾಪೂಗೌಡ ಪಾಟೀಲ ಶೇಗುಣಸಿ, ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಗಂಗಾಧರ ಸಂಬಣ್ಣಿ, ಆಯುಕ್ತ ರಾಜಶೇಖರ ಡಂಬಳ, ಮುಖಂಡರಾದ ಅಬ್ದುಲ್ ಹಮೀದ್ ಮುಶ್ರೀಫ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಶಿಥಿಲಾವಸ್ಥೆಯ ಅಂಗನವಾಡಿ ಕಟ್ಟಡಕ್ಕೆ ಕಾಂಪೌಂಡ್ ಬೇರೆ ಕೇಡು!

### ಚಿಂಚೋಳಿ ಅಂಗನವಾಡಿಯಲ್ಲಿ ಅಧಿಕಾರಿಗಳ 'ಕಮಿಷನ್' ಲೀಲೆ! । ಗ್ರಾಮಸ್ಥರ ಆಕ್ರೋಶ

■ ಉದಯರಶ್ಮಿ ದಿನಪತ್ರಿಕೆ

■ ವಿಶೇಷ ವರದಿ

ಅಫ್ಜಲಪುರ: "ಸೋರುತಿಹದು ಮನೆಯ ಮಾಳಿಗೆ ಅಜ್ಞಾನದಿಂದ.." ಶಿಶುನಾಳ ಶರೀಫರ ಈ ಮಾತು ಅಫ್ಜಲಪುರ ತಾಲೂಕಿನ ಚಿಂಚೋಳಿ ಗ್ರಾಮದ ಅಂಗನವಾಡಿ ಕೇಂದ್ರಗಳ ಪ್ರಸ್ತುತ ಸ್ಥಿತಿಗೆ ಕನ್ನಡಿ ಹಿಡಿದಂತಿದೆ. ತಲೆಯ ಮೇಲಿನ ಸೂರು ಕುಸಿದು ಬೀಳುವ ಅಪಾಯದಲ್ಲಿದ್ದರೂ, ಅದನ್ನು ದುರಸ್ತಿ ಮಾಡದ ಅಧಿಕಾರಿಗಳು ಮಾತ್ರ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಕಾಂಪೌಂಡ್ ಗೋಡೆ ನಿರ್ಮಿಸಲು ಹೊರಟಿರುವುದು ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ.

ಉದುರುತ್ತಿದೆ ಸಿಮೆಂಟ್ ಪ್ಲಾಸ್ಟರ್, ಜೀವಭಯದಲ್ಲಿ ಮಕ್ಕಳು ಚಿಂಚೋಳಿ ಗ್ರಾಮದ ಒಂದು ಅಂಗನವಾಡಿ ಕಟ್ಟಡದ ಛಾವಣಿಯ ಪ್ಲಾಸ್ಟರ್ ಕಿತ್ತು ಸಿಮೆಂಟ್ ಚೂರುಗಳು ನೆಲಕ್ಕೆ ಉದುರುತ್ತಿವೆ. ಪಕ್ಕದಲ್ಲೇ ಇರುವ ಮತ್ತೊಂದು ಹಳೆಯ ಕಟ್ಟಡ ಸಂಪೂರ್ಣ ಶಿಥಿಲಾವಸ್ಥೆ ತಲುಪಿದ್ದು, ಬಳಕೆಗೆ ಯೋಗ್ಯವಾಗಿಲ್ಲ. ಶಿಥಿಲ ಕಟ್ಟಡ ಅಪಾಯಕಾರಿಯಾದ ಕಾರಣ ಅಂಗನವಾಡಿಯನ್ನು ಅನಿವಾರ್ಯವಾಗಿ ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುತ್ತಿದೆ.

**ಅಧಿಕಾರಿಗಳ ವಿಚಿತ್ರ ಆದ್ಯತೆ: ಕಟ್ಟಡವಿಲ್ಲದ ಜಾಗಕ್ಕೆ ಕಾಂಪೌಂಡ್!**




ಮಕ್ಕಳು ಕೂರಲು ಯೋಗ್ಯವಾದ ಸೂರು ಇಲ್ಲದಿರುವಾಗ, ಶಿಥಿಲಗೊಂಡಿರುವ ಹಾಗೂ ಬಳಕೆಯಲ್ಲಿಲ್ಲದ ಕಟ್ಟಡಗಳ ಸುತ್ತ ಕಾಂಪೌಂಡ್ ಗೋಡೆ ನಿರ್ಮಿಸುವ ಅಗತ್ಯವೇನಿತ್ತು ಎಂಬ ಪ್ರಶ್ನೆ ಸಾರ್ವಜನಿಕರಲ್ಲಿ ಮೂಡಿದೆ. ಮಕ್ಕಳ ಜೀವ ರಕ್ಷಣೆಗಾಗಿ ಕಟ್ಟಡ ದುರಸ್ತಿ ಮಾಡುವುದನ್ನು ಬಿಟ್ಟು ಕಾಂಪೌಂಡ್ ನಿರ್ಮಾಣಕ್ಕೆ ಅನುದಾನ ಬಳಕೆ ಮಾಡುತ್ತಿರುವುದು ಅಧಿಕಾರಿಗಳ ಬೇಜವಾಬ್ದಾರಿಯನ್ನು ಎತ್ತಿ ತೋರಿಸುತ್ತದೆ.

**ಅನುದಾನ ಗುಳುಂ ಮಾಡಲು ಸ್ಥಳ ಬದಲಾವಣೆ ತಂತ್ರ?**

ಬೇರೆ ಅಂಗನವಾಡಿ ಕೇಂದ್ರಕ್ಕೆ ಮಂಜೂರಾಗಿದ್ದ ಕಾಂಪೌಂಡ್ ಕಾಮಗಾರಿಯನ್ನು ನಿಯಮಬಾಹಿರವಾಗಿ ಇಲ್ಲಿಗೆ ಸ್ಥಳಾಂತರಿಸಿ, ಬಿಲ್ ಪಾಸ್ ಮಾಡಿಕೊಳ್ಳಲು ಅಧಿಕಾರಿಗಳು ಹಾಗೂ ಎಂಜಿನಿಯರ್‌ಗಳು ಶಾಮೀಲಾಗಿದ್ದಾರೆ ಎಂಬ ಗಂಭೀರ ಆರೋಪ ಕೇಳಿಬಂದಿದೆ. ಕೇವಲ ಹಣ ಲೂಟಿ ಮಾಡುವ ಉದ್ದೇಶದಿಂದ ಈ 'ತಂತ್ರ' ರೂಪಿಸಲಾಗಿದೆ ಎಂದು ಸ್ಥಳೀಯರು ನೇರವಾಗಿ ಆರೋಪಿಸುತ್ತಿದ್ದಾರೆ.

ಗ್ರಾಮಸ್ಥರು ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ಹಾಗೂ ಜಿಲ್ಲಾಡಳಿತ ತಕ್ಷಣ ಮಧ್ಯಪ್ರವೇಶಿಸಿ ಕಾಮಗಾರಿಯ ತನಿಖೆ ನಡೆಸಿ, ಮಕ್ಕಳ ಹಿತದೃಷ್ಟಿಯಿಂದ ಹೊಸ ಸುಸಜ್ಜಿತ ಕಟ್ಟಡ ನಿರ್ಮಿಸಿಕೊಡಬೇಕೆಂದು ಆಗ್ರಹಿಸಿದ್ದಾರೆ.



## ಇಂಡಿ ಬರಗಾಲ ತಾಲೂಕೆಂದು ಘೋಷಿಸಲು ರೈತಸಂಘ ಆಗ್ರಹ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಕೂಡಲೆ ಇಂಡಿ ತಾಲೂಕನ್ನು ಬರಗಾಲ ತಾಲೂಕು ಎಂದು ಘೋಷಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಹಸಿರು ಸೇನೆ ಹಾಗೂ ರೈತ ಸಂಘದ ಪದಾಧಿಕಾರಿಗಳು ಶುಕ್ರವಾರ ತಹಸೀಲ್ದಾರ ನಾಗೇಂದ್ರ ಕೋಳಶೆಟ್ಟಿ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷ ಎಸ್.ಬಿ. ಕೆಂಬೋಗಿ ಮಾತನಾಡಿ, ತಕ್ಷಣವೇ ಸರಕಾರ ಬರಗಾಲ ಘೋಷಿಸಲು ಕ್ರಮ ಕೈಗೊಳ್ಳದಿದ್ದರೆ ತಾಲ್ಲೂಕು ಕಚೇರಿ ಮುಂದೆ ಹಾಗೂ ಬಸವೇಶ್ವರ ವೃತ್ತದಲ್ಲಿ ಉಗ್ರ ಧರಣಿ ಸತ್ಯಾಗ್ರಹ ನಡೆಸಲಾಗುವುದು. ತಾಲೂಕಿನಾದ್ಯಂತ ಕುಡಿಯುವ ನೀರಿನ ತೀವ್ರ ಅಭಾವ ಸೃಷ್ಟಿಯಾಗಿದ್ದು, ಬಿತ್ತನೆ ಕಾರ್ಯಗಳು ಸಂಪೂರ್ಣ ಕುಂಠಿತಗೊಂಡಿವೆ. ಇಡೀ ತಾಲೂಕಿಗೆ ಸರ್ಕಾರ ಅನ್ಯಾಯ ಎಸಗಿದೆ" ಎಂದು ದೂರಿದರು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ಮಲ್ಲಿಕಾರ್ಜುನ್ ನಾವದಗಿ, ತಮ್ಮಾರಾಯ ಆಸಂಗಿ, ಹನುಮಂತ್‌ಸಿಂಗ್ ರಜಪೂತ್, ಮಲ್ಲಿಕಾರ್ಜುನ ಹೊರ್ತಿ, ಬಸುಗೌಡ ಪಾಟೀಲ, ಅದೃಷ್ಟಪ್ಪ ವಾಲಿ, ಭೀಮರಾಯ ಪೂಜಾರಿ, ಪರಪ್ಪ ಕೆಂಭೋಗಿ, ಸಿದ್ದಣ್ಣ ತಳವಾರ ಸೇರಿದಂತೆ ತಾಲೂಕಿನ ನೂರಾರು ರೈತ ಬಾಂಧವರು ಉಪಸ್ಥಿತರಿದ್ದರು.

## ಡಾ.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಮೂಲಸೌಕರ್ಯ ಒದಗಿಸಲು ದವಿಪ ಆಗ್ರಹ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ವಿದ್ಯಾರ್ಥಿಗಳು, ಯುವ ಕ್ರೀಡಾಪಟುಗಳು ಹಾಗೂ ಸಾರ್ವಜನಿಕರು ಎದು-ರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಕೂಡಲೇ ಪರಿಹ-ರಿಸುವಂತೆ ಆಗ್ರಹಿಸಿ ದಲಿತ ವಿದ್ಯಾರ್ಥಿ ಪರಿಷತ್ ವತಿಯಿಂದ ವಿಜಯಪುರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

### ದಲಿತ ವಿದ್ಯಾರ್ಥಿ ಪರಿಷತ್ ವತಿಯಿಂದ ವಿಜಯಪುರ ಜಿಲ್ಲಾಧಿಕಾರಿಗಳಿಗೆ ಮನವಿ




ಜಿಲ್ಲೆಯ ನೂರಾರು ವಿದ್ಯಾರ್ಥಿಗಳು ಹಾಗೂ ಕ್ರೀಡಾಪಟುಗಳು ಪ್ರತಿದಿನ ಕ್ರೀಡಾಭ್ಯಾಸಕ್ಕಾಗಿ ಜಿಲ್ಲಾ ಕ್ರೀಡಾಂಗಣವನ್ನು ಅವಲಂಬಿಸಿದ್ದಾರೆ. ಆದ-'ರೆ ಕ್ರೀಡಾಂಗಣದಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳ ಕೊರತೆ, ಸಮರ್ಪಕ ನಿರ್ವಹಣೆಯ ಅಭಾವ ಹಾಗೂ ವಿವಿಧ ಶುಲ್ಕಗಳ ಹೆಚ್ಚಳದಿಂದಾಗಿ ವಿದ್ಯಾರ್ಥಿಗಳು ಮತ್ತು ಕ್ರೀಡಾಪಟುಗಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಕ್ರೀಡಾಂಗಣವು ಕ್ರೀಡಾಪಟುಗಳ ಪ್ರತಿಭೆ ಬೆಳೆಸುವ ಕೇಂದ್ರವಾಗಬೇಕಾದರೆ, ಮೊದಲು ಅಲ್ಲಿನ ಮೂಲಸೌಕರ್ಯಗಳನ್ನು ಸಮರ್ಪಕವಾಗಿ ಅಭಿವೃದ್ಧಿಪಡಿಸಬೇಕು ಎಂದು ಪರಿಷತ್ ಆಗ್ರಹಿಸಿದೆ.

ಕ್ರೀಡಾಪಟುಗಳಿಗೆ ಅಗತ್ಯವಿರುವ ಕ್ರೀಡಾ ಸಾಮಗ್ರಿಗಳನ್ನು ವೈಜ್ಞಾನಿಕ ಮಾನದಂಡಗಳಿಗೆ ಅನುಗುಣವಾಗಿ ಖರೀದಿಸಿ ಒದಗಿಸುವ ಮೂಲಕ ಜಿಲ್ಲೆಯ ಪ್ರತಿಭಾವಂತ ಕ್ರೀಡಾಪಟುಗಳಿಗೆ ಉತ್ತೇಜನ ನೀಡಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ. ಈ ಸಂದರ್ಭದಲ್ಲಿ ದಲಿತ ವಿದ್ಯಾರ್ಥಿ ಪರಿಷತ್ತಿನ ರಾಜ್ಯಾಧ್ಯಕ್ಷ ಶ್ರೀನಾಥ್ ಪೂಜಾರಿ ಮಾತನಾಡಿ, ಜಿಲ್ಲಾಡಳಿತ ಈ ಕು-ರಿತು ಕೂಡಲೇ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು" ಎಂದು ಎಚ್ಚರಿಸಿದರು. ಜಿಲ್ಲಾ ನಗರ ಘಟಕ ಅಧ್ಯಕ್ಷ ಹುಚ್ಚಪ್ಪ ಬಾವಿಮನಿ ಮತ್ತು ದಾವೂದ್ ನಾಯ್ಕೋಡಿ, ಪ್ರಭು ಹೊಸಮನಿ, ಮಂಜು ಶಿವು ಸುದೀಪ ವಿಶ್ವನಾಥ ಚೇತನ ಗಿರೀಶ ಪವನ ಹಣಮಂತ ಸಾಗರ ಅಮಿತಾ ವೀರೇಶ ಕಾರ್ತಿಕ ರಾಮು ವಿಜಯಕುಮಾರ್ ಆಕಾಶ ಹರೀಶ ಇತರರು ಉಪಸ್ಥಿತರಿದ್ದರು.



## 5 ಬಡ ಕುಟುಂಬಗಳ ಮನೆಗಳ ತೆರವು ಕುಟುಂಬಗಳು ಬೀದಿಗೆ : ಅಯ್ಯಪ್ಪ ರಾಮತೀರ್ಥ

ಕಲಬುರ್ಗಿ:ಜಿಲ್ಲೆಯ ಚಿತ್ತಾಪುರ ತಾಲೂಕಿನ ಸುಕ್ಷೇತ್ರ ನಾಗಾವಿ ಪಾರಂಪರಿಕ ಪ್ರದೇಶದ ನಂದಿ ಭಾವಿ ಪಕ್ಕದಲ್ಲಿ ಸುಮಾರು 21 ವರ್ಷಗಳಿಂದ ವಾಸವಿರುವ ಬಡ ಹಾಗೂ ನಿರ್ಗತಿಕ 5 ಕುಟುಂಬಗಳ ಮನೆಗಳನ್ನು ತಾಲೂಕು ಆಡಳಿತವು ರಾಜ್ಯ ಪುರಾತತ್ವ ಇಲಾಖೆಯ ಸೂಚನೆಯ ಮೇರೆಗೆ ಹಾಗೂ ಇಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸುವ ಕಾರಣದಿಂದ ಈ 5 ಬಡ ಕುಟುಂಬಗಳ ಮನೆಗಳನ್ನು ತೆರವು ಗೊಳಿಸಬೇಕೆಂಬ ಸೂಚನೆಯಿಂದ ಯಾರ ಆಸರೆ ಇಲ್ಲದ ಇಲ್ಲಿನ ಕುಟುಂಬಗಳು ತೊಂದರೆಗೊಳಗಾಗಿ ಬೀದಿಗೆ ಬರುವಂತಾಗಿತ್ತು. ಈ ವಿಷಯವಾಗಿ ನಾನು ದಿನಾಂಕ 21-08-2026 ರಂದು ತಹಶೀಲ್ದಾರರ ಕಚೇರಿಗೆ ತೆರಳಿ ತಾಲೂಕ ದಂಡಾಧಿಕಾರಿಗಳಾದ ಮಾನ್ಯ ಶ್ರೀ ನಾಗಯ್ಯ ಸ್ವಾಮಿ ಹಿರೇಮಠ ಅವರನ್ನು ಭೇಟಿ ಮಾಡಿ ಈ ವಿಷಯದ ಬಗ್ಗೆ ಸುಧೀರ್ಘವಾಗಿ ಚರ್ಚೆ ಮಾಡಲಾಯಿತು. ಮಾನವೀಯತೆಯ ದೃಷ್ಟಿಯಿಂದ ಈ ನಿರ್ಗತಿಕ ಕುಟುಂಬಗಳನ್ನೂ ಬೇರೆ ಕಡೆ ವಾಸಿಸಲು ಸಮಯವಕಾಶ ಹಾಗೂ ಸರ್ಕಾರದ ಯಾವುದಾದರೂ ನಗರ ವಸತಿ ಯೋಜನೆಯಲ್ಲಿ ಮನೆ ಕಟ್ಟಿಕೊಳ್ಳಲು ಈ ಕುಟುಂಬಗಳಿಗೆ ಅವಕಾಶ ಕಲ್ಪಿಸಿ ಸಹಾಯ ಮಾಡಬೇಕೆಂದು ತಾಲೂಕ ಆಡಳಿತಕ್ಕೆ ಅಂ-ದು ಮನವಿ ಮಾಡಿದ್ದೇನು. ಅಲ್ಲದೆ ಈ ವಿಷಯವನ್ನು ಮಾನ್ಯ ಜಿಲ್ಲಾಧಿಕಾರಿಗಳ ಕಚೇರಿ ಕಲ್ಬುರ್ಗಿ ಹಾಗೂ ರಾಜ್ಯ ಪುರಾತತ್ವ ಇಲಾಖೆಯ ಉಪನಿರ್ದೇಶಕರ ಗಮನಕ್ಕೂ ಸಹ ದೂರವಾಣಿ ಮುಖಾಂತರ ತಂದಿರುತ್ತೇನೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ತಹಶೀಲ್ದಾರರು ಕೂಡ ಸಕಾರಾತ್ಮಕವಾಗಿ ಸ್ಪಂದಿಸಿ ಅಂದು ನನಗೆ ಭರವಸೆಯನ್ನು ನೀಡಿದ್ದರು. ಅದರಂತೆ ಇಂದು ದಿನಾಂಕ 27-08-2026 ರಂದು ಅವರು ಅವರ ಸಿಬ್ಬಂದಿಯೊಂದಿಗೆ ಇಂದು ಸ್ಥಳಕ್ಕೆ ಭೇಟಿ ನೀಡಿ ಇಲ್ಲಿ ವಾಸವಿರುವ ಈ 5 ಬಡ ಕುಟುಂಬಗಳಾದ 1) ಶ್ರೀಮತಿ ದೇವಕಿ ಗಂಡ ದೇವಪ್ಪ. 2) ಶ್ರೀಮತಿ ಸಾಯಮ್ಮ ಗಂಡ ದೇವಯ್ಯ 3) ಶ್ರೀಮತಿ ಪಾರ್ವತಿ ಗಂಡ ರಾಜು 4) ಶ್ರೀಮತಿ ಪದ್ಮ ಗಂಡ ನರಸಪ್ಪ 5) ಶ್ರೀ ಶಿವಪ್ಪ ತಂದೆ ಮಲ್ಲಪ್ಪ ಎಂಬುವವರ ಈ ಕುಟುಂಬಗಳು ಹಾಗೂ ಅವರ ಮಕ್ಕಳು ಸೇರಿದಂತೆ ಒಟ್ಟು 18 ಸದಸ್ಯರು ಇಲ್ಲಿ ನೆಲೆಸಿರುತ್ತಾರೆ. ಮಾನ್ಯ ತಸಿಲ್ದಾರರು ಇಲ್ಲಿನ ವಾಸ್ತವ ಪರಿಸ್ಥಿತಿಯನ್ನು ಅರಿತು ಕೇವಲ 3 ದಿನಗಳ ಒಳಗಾಗಿ ಇಲ್ಲಿನ ಮನೆಗಳನ್ನು ತೆರವುಗೊಳಿಸುವ ಅವರ ಆದೇಶವನ್ನು ಪುನರ್ ಪರಿಶೀಲಿಸಿ ಹೆಚ್ಚಿನ ಸಮಯಾವಕಾಶ ನೀಡಲು ಮನವಿ ಮಾಡಲಾಯಿತು.

## ಪ್ರಧಾನಿ ಮೋದಿ ವರ್ಚುವಲ್ ಭಾಷಣದ ನೇರ ಪ್ರಸಾರ ವೀಕ್ಷಣೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ವಿಕಸಿತ ಭಾರತ್ ಯುವ ಸಂಪರ್ಕ ಹಾಗೂ ರಾಷ್ಟ್ರೀಯ ಕ್ರೀಡಾ ದಿನದ ಅಂಗವಾಗಿ "ಖೇಲೋ ಇಂಡಿಯಾ ಸಂವಾದ – ಖೇಲ್ ಕಿ ಬಾತ್ ಪಿಎಂ ಮೋದಿ ಕೆ ಸಾಥ್" ಕಾರ್ಯಕ್ರಮವನ್ನು ಜಿಲ್ಲೆಯ ಏಕೈಕ ಕಾಲೇಜಾಗಿ ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು.

### ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯಲ್ಲಿ ಖೇಲೋ ಇಂಡಿಯಾ ಸಂವಾದ



ಕಾಲೇಜಿನ ಎನ್.ಎಸ್.ಎಸ್ ಘಟಕ-1, 2 ಮತ್ತು ಐಕ್ಯೂಎಸಿ ವತಿಯಿಂದ ಆ.27ರಂದು ಬೆಳಿಗ್ಗೆ 10:30ಕ್ಕೆ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ವರ್ಚುವಲ್ ಭಾಷಣದ ನೇರ ಪ್ರಸಾರ ವೀಕ್ಷಿಸಲಾಯಿತು. ಕ್ರೀಡೆ, ಶಿಸ್ತು, ತಂಡದ ಕೆಲಸ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರದ ಕುರಿತು ಪ್ರಧಾನಿ ಕರೆ ನೀಡಿದರು.

ಈ ವೇಳೆ ಮೈ ಭಾರತ್ ಉಪಕ್ರಮ, ಯುವ ಸಂವಾದ ವೇದಿಕೆ ಕುರಿತು ಮಾಹಿತಿ ನೀಡಲಾಯಿತು. ವಿದ್ಯಾರ್ಥಿಗಳಿಂದ ನಶಾ ಮುಕ್ತ ಯುವ ಪ್ರತಿಜ್ಞೆ ಸ್ವೀಕ-ರಿಸಲಾಯಿತು.

ಈ ಸಂದರ್ಭದಲ್ಲಿ ಪ್ರಾಚಾರ್ಯ ಡಾ. ಅನಿಲ್ ಭಿ.ನಾಯಕ್, ಐಕ್ಯೂಎಸಿ ಸಂಯೋಜಕ ಡಾ. ಪಿ.ಎಸ್. ಪಾಟೀಲ್, ತಾಲ್ಲೂಕು ಮಟ್ಟದ ಎನ್ ಎಸ್ ಎಸ್ ನೋಡಲ್ ಅಧಿಕಾರಿ ರಾಜು ಬಿ. ಕಪಾಲಿ, ಕಾರ್ಯಕ್ರಮದ ಮಾಡರೇಟ-ರ್ ಕುಶಾಲ್ ಕಲಗೊಂಡ, ಮೈ ಭಾರತ್ ಅಧಿಕಾರಿ ಗಣೇಶ್ ರಾಠೋಡ್, ರಾಷ್ಟ್ರೀಯ ಯುವ ಸ್ವಯಂಸೇವಕ ಅವಿನಾಶ್ ನಾಯಕ್, ಆಲ್ ಇಂಡಿಯಾ ರೇಡಿಯೋ ಜಿಲ್ಲಾ ವರದಿಗಾರ ಎನ್. ಗಂಗಾಧರ್, ಕಾಲೇಜಿನ ಎನ್ ಎಸ್ ಎಸ್ ಘಟಕ 1&2 ರ ಕಾರ್ಯಕ್ರಮ ಅಧಿಕಾರಿಗಳಾದ ಡಾ.ಮಿಲನ್ ರಾಠೋಡ್, ಡಾ. ತರನ್ನುಮ್ ಜಬೀನ್ ಖಾನ್‌ಪ್ರೊ.ಕೃಷ್ಣಾ ಮಂಡ್ಲಾ, ಪ್ರೊ.ಪವನಕುಮಾರ್ ಮಹೀಂದ್ರಕರ್, ಡಾ. ಧರಮಗುರು ಪ್ರಸಾದ್ ಎಂ. ಪಿ. ಪ್ರೊ. ಶ್ವೇತಾ ಸವಣೂರ್, ಮಹಾವಿದ್ಯಾಲಯದ ಬೋಧಕರು,ಬೋಧಕೇತರ ಸಿಬ್ಬಂದಿ ಮತ್ತು ಎನ್ ಎಸ್ ಎಸ್ ಸ್ವಯಂಸೇವಕ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ದೇವರಹಿಪ್ಪರಗಿ ರಾವುತರಾಯನ ಅಲಂಕಾರ ಕಾರ್ಯ ಸಂಪನ್ನ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಪಟ್ಟಣದ ಸರ್ವಜನಪೂಜಿತ ರಾವುತರಾಯನ ಅಲಂಕಾರ(ಬಣ್ಣ)ಕಾರ್ಯ ಸಂಪನ್ನಗೊಂಡಿದ್ದು, ವಿವಿಧ ಧಾರ್ಮಿಕ ಕಾರ್ಯಗಳ ನಂತರ ಬಂಡಿ ಉತ್ಸವದ ಮೂಲಕ ಸ್ವಸ್ಥಾನಕ್ಕೆ ಮರಳಲಿದ್ದಾನೆ.

ರಾವುತರಾಯ ಅಲಂಕಾರ ಕಾರಣವಾಗಿ ಮಲ್ಲಯ್ಯ ದೇವಸ್ಥಾನ ಪ್ರವೇಶಿಸಿದ್ದು ಸುಮಾರು 4 ತಿಂಗಳು ತರುವಾಯ ಪುನಃ ಅದ್ದೂರಿ ಬಂಡಿ ಉತ್ಸವದೊಂದಿಗೆ ಸೆಪ್ಟೆಂಬರ್ ದಿ:4 ರಂದು ಶುಕ್ರವಾರ ತನ್ನ ಮೂಲಸ್ಥಾನಕ್ಕೆ



ಬರಲಿದ್ದಾನೆ. ಅದಕ್ಕಿಂತ ಮುಂಚೆ ಇದೇ ದಿ: 30ರಂದು ಭಾನುವಾರ ಮಲ್ಲಾರಿ ಹೋಮ, ದಿ:31 ರಂದು ಸೋಮವಾರ ಮಲ್ಲಯ್ಯನ ಹೋಮ ನಂತರ ಸೆಪ್ಟೆಂಬರ 3ರಂದು ಗುರುವಾರ ಬಂಡಿ ತುಂಬುವ ಕಾರ್ಯ ಜರುಗಲಿದೆ ಎಂದು ಮಲ್ಲಯ್ಯ, ರಾವುತರಾಯ ದೇವಸ್ಥಾನ ಸಮಿತಿ ಪ್ರಕಟಣೆ ಮೂಲಕ ತಿಳಿಸಿದೆ.

# ಖಳನಾಯಕ ಪಟ್ಟ ಕಟ್ಟಿಸಿಕೊಂಡ ಶರಣ ಕೊಂಡೆ ಮಂಚಣ್ಣ

■ ಉದಯರಶ್ಮಿ ದಿನಪತ್ರಿಕೆ

### ಸಾವಿಲ್ಲದ ಶರಣರು

ಕೊಂಡೆ ಮಂಚಣ್ಣ ಬಿಜ್ಜಳನ ಆಸ್ಥಾನದ ಮಂತ್ರಿಯಾಗಿದ್ದು, ಬಸವಣ್ಣನವರಿಗೆ ಅತ್ಯಂತ ಆಪ್ತಚರನಾದ ಮಂಚಣ್ಣನವರನ್ನು ಕೆಲ ವೈದಿಕ ಮನಸ್ಸು ಇತಿಹಾಸದಲ್ಲಿ ಅವನಿಂದಲೇ ಕಲ್ಯಾಣ ಕ್ರಾಂತಿಗೆ ಕಾರಣವಾಯಿತು ಎನ್ನುವ ಹುಸಿ ಕಥೆಯನ್ನು ಸೃಷ್ಟಿ ಮಾಡಿದರು.

ಈತ ಗುಪ್ತ ಭಕ್ತಿಯನ್ನು ಮಾಡುತ್ತಿದ್ದ ವೈಷ್ಣವ ಬ್ರಾಹ್ಮಣ ಇದನ್ನು ಸಹಿಸದ ಶೈವ ಬ್ರಾಹ್ಮಣರು ಈತನ ಮೇಲೆ ಖೊಟ್ಟಿ ಆರೋಪವನ್ನು ಹೊರಿಸಿ ಬಸವ ದ್ರೋಹಿ ಎನ್ನುವಂತೆ ಬಿಂಬಿಸಿದರು .

ಕೊಂಡೆ ಮಂಚಣ್ಣ 12ನೇ ಶತಮಾನದ ಕಲ್ಯಾಣದ ಶರಣರಲ್ಲಿ ಒಬ್ಬರು. ಇವರು ಬಸವಣ್ಣನವರ ಕಾಲದವರು. ಕೊಂಡೆ ಮಂಚಣ್ಣರ ಇವರು ಶರಣರ ಆಂದೋಲನದಲ್ಲಿ ಮತ್ತು ಕಲ್ಯಾಣದ ಕ್ರಾಂತಿಯ ಸಮಯದಲ್ಲಿ ಉಲ್ಲೇಖಗೊಳ್ಳುವ ವ್ಯಕ್ತಿ.

ಇವರ ಧರ್ಮಪತ್ನಿ ಲಕ್ಷ್ಮಮ್ಮ. ಲಕ್ಷ್ಮಮ್ಮ ಅವರು ಮೊದಲು ಹರಿಭಕ್ತಿಯಲ್ಲಿದ್ದು, ನಂತರ ಶಿವಭಕ್ತಿಯನ್ನು ಸ್ವೀಕರಿಸಿದ ಶರಣೆ. ಇವರ ವಚನಗಳ ಅಂಕಿತನಾಮ 'ಅಗಜೇಶ್ವರಲಿಂಗ'. ಐತಿಹಾಸಿಕ ಹಾಗೂ ಸಾಹಿತ್ಯಿಕ ಉಲ್ಲೇಖ: ಬಸವ ಯುಗದ ಕೆಲ ಪರಂಪರೆ ಹಾಗೂ ಕಥೆಗಳಲ್ಲಿ ಕೊಂಡೆ ಮಂಚಣ್ಣನವರ ಹೆಸರು ಬರುತ್ತದೆ. ಇವರನ್ನು ಕೆಲವೊಮ್ಮೆ ಗುಪ್ತ ಮಂಚಣ್ಣ ಎಂತಲೂ ಕರೆದಿದ್ದಾರೆ ಇವರನ್ನು ಕೊಂಡೆ ಮಂಚಣ್ಣ ಅಥವಾ ಧೂಪದ ಮಂಚಣ್ಣಇವರಿಬ್ಬರೂ ಬೇರೆ ಎಂದು ಚರ್ಚಿಸಲಾಗುತ್ತದೆಯಾದರೂ, ವಚನ ಸಾಹಿತ್ಯದ ಐತಿಹಾಸಿಕ ಹಿನ್ನೆಲೆಯಲ್ಲಿ ಇವರ ಹೆಸರು ಚಿರಪರಿಚಿತ.

### ಕೊಂಡೆ ಮಂಚಣ್ಣನವರ ಪತ್ನಿ ಲಕ್ಷ್ಮಮ್ಮ

**ಕೊಂಡೆ ಮಂಚಣ್ಣನವರ ಪತ್ನಿ ಲಕ್ಷ್ಮಮ್ಮ 12ನೇ ಶತಮಾನದ ಕಲ್ಯಾಣ ಕ್ರಾಂತಿಯ ಕಾಲದ ಒಬ್ಬ ಪ್ರಮುಖ ಶಿವಶರಣೆ ಮತ್ತು ವಚನಗಾರ್ತಿ ಆಗಿದ್ದಾರೆ. ಇವರನ್ನು ವಚನ ಸಾಹಿತ್ಯದಲ್ಲಿ 'ಕೊಂಡೆಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ' ಎಂದೇ ಗುರುತಿಸಲಾಗುತ್ತದೆ.**

**ಅಂಕಿತನಾಮ: ಇವರ ವಚನಗಳ ಅಂಕಿತನಾಮ "ಅಗಜೇಶ್ವರಲಿಂಗ" ಅಥವಾ "ಅಗಜೇಶ್ವರ" ಪತಿ ಕೊಂಡೆ ಮಂಚಣ್ಣ ಹಾಗೂ ಇವರು ಆರಂಭದಲ್ಲಿ ಬಸವಣ್ಣನವರ ತತ್ವಗಳಿಗೆ ವಿರೋಧಿಯಾಗಿದ್ದರೆಂಬ ನಂಬಿಕೆ ಇದ್ದರೂ, ಲಕ್ಷ್ಮಮ್ಮನವರು ಸ್ವತಃ ಒಬ್ಬ ಶ್ರೇಷ್ಠ ಶರಣೆಯಾಗಿ ವೈಚಾರಿಕ ಮನೋಭಾವದ ವಚನಗಳನ್ನು ರಚಿಸಿದ್ದಾರೆ.**

**ವಚನಗಳ ವೈಶಿಷ್ಟ್ಯ: ಇವರ ವಚನಗಳಲ್ಲಿ ಸಾಮಾಜಿಕ ಜಾಗೃತಿ, ಭಕ್ತಿ, ನಿರ್ಭೀತಿ ಮತ್ತು ಅಂದಿನ ಸಮಾಜದಲ್ಲಿದ್ದ ಡಾಂಬಿಕತೆಯನ್ನು ಖಂಡಿಸುವ ವಿಚಾರಗಳು ಎದ್ದು ಕಾಣುತ್ತವೆ.**

### ಶರಣ ಮಂಚಣ್ಣ ಖಳನಾಯಕನೇಕೆ ಎನಿಸಿಕೊಂಡನು?

ಮಂತ್ರಿ ಮಂಚಣ್ಣ ಬಸವಣ್ಣ ಮತ್ತು ಬಿಜ್ಜಳರ ಜೊತೆಗೆ ಮಧುರ ಭಾಂಧವ್ಯವನ್ನು ಹೊಂದಿದವನು. ಕನ್ನಡ ಭಾಷೆಯಲ್ಲಿ ಕೊಂಡೆ ಎನ್ನುವುದಕ್ಕೆ ಹಲವು ಅರ್ಥಗಳಿವೆ.


ಕನ್ನಡದಲ್ಲಿ 'ಕೊಂಡೆ' ಎಂದರೆ ಹಲವು ಅರ್ಥಗಳಿವೆ. ಒಂದು ಅರ್ಥದಲ್ಲಿ ಕೊಂಡೆ ಎಂದರೆ ಸೇತುವೆ ಸಂಬಂಧಗಳನ್ನು ಬೆಸೆಯುವ ಸಾಧನ ಎಂತಲೂ ಎಂದುಕೊಳ್ಳಬಹುದು. ಅರಸ



ಬಿಜ್ಜಳ ಮತ್ತು ಬಸವಣ್ಣನವರ ನಡುವೆ ಮಧುರ ಬಾಂಧವ್ಯ ಮತ್ತು ಸಂಬಂಧವನ್ನು ಬೆಸೆಯುವ ಮತ್ತುಪರಸ್ಪರ ರಾಜತಾಂತ್ರಿಕ ಮಹತ್ತರವಾದ ವಿಷಯಗಳನ್ನು ಹೇಳುತ್ತಿರುವ ಕಾರ್ಯವನ್ನು ಮಾಡುತ್ತಿದ್ದನು.

### ಕೊಂಡೆ ಮಂಚಣ್ಣನು ಗುಪ್ತಚರ ಮಂಚಣ್ಣನಾಗಿದ್ದು ಹೇಗೆ?

ಮಂಚಣ್ಣನು ಒಬ್ಬ ವೈಷ್ಣವ ಬ್ರಾಹ್ಮಣ, ಆವತ್ತಿನ ಬಸವಣ್ಣನವರ ಸಾಮಾಜಿಕ ಸುಧಾರಣೆ ಧಾರ್ಮಿಕ ಸ್ವಾತಂತ್ರ್ಯಕ್ಕೆ ಆಕರ್ಷಿತನಾಗಿ ತಾನೂ ಕೂಡ ಲಿಂಗಾಯತ ಧರ್ಮದಲ್ಲಿ ಪಾಲ್ಗೊಳ್ಳಬೇಕೆಂಬ ಆಸೆಯನ್ನು ಹೊಂದಿದ್ದನು. ತನ್ನ ಸುತ್ತಲಿನ ಪರಿಸರ ವೈಷ್ಣವ ಮತ್ತು ಶೈವ ಪಂಥೀಯರ ನಿರಂತರ ತಿಕ್ಕಾಟದಲ್ಲಿ ತಾನು ಇಷ್ಟ ಲಿಂಗ ಪೂಜೆಯನ್ನು ಬಹಿರಂಗವಾಗಿ ಮಾಡಿಕೊಳ್ಳಲು ಮತ್ತು ವಚನ ಚಳುವಳಿಯಲ್ಲಿ ಬಹಿರಂಗವಾಗಿ ಗುರುತಿಸಲು ಹಿಂದೇಟು ಹಾಕುತ್ತಿದ್ದನು, ಹೀಗಾಗಿ ಗೌಪ್ಯವಾಗಿ ತಾನು ತನ್ನ ಮನೆಯಲ್ಲಿಯೇ ಗುಪ್ತವಾಗಿ ಲಿಂಗ ಯೋಗವನ್ನು ಮಾಡುತ್ತಿದ್ದನು. ಬಸವಣ್ಣನವರ ಮತ್ತು ಕೊಂಡೆ ಮಂಚಣ್ಣನವರ ಆತ್ಮೀಯತೆಯನ್ನು ಕಂಡು



ಕಸಿವಿಸಿಗೊಂಡ ಶೈವರು ಇವರ ಮೇಲಿನ ಗುಮಾನಿಯಿಂದ ಕೊಂಡೆ ಮಂಚಣ್ಣನವರ ಮನೆಯ ಕಿಟಕಿಯಿಂದ ಇಣುಕಿ ನೋಡುತ್ತಿರುವಾಗ, ಕೊಂಡೆ ಮಂಚಣ್ಣ ಬಾಹ್ಯವಾಗಿ ವೈಷ್ಣವನಾಗಿ ನಟಿಸುತ್ತಾ ಒಳಗೊಳಗೇ ಲಿಂಗ ಪೂಜೆ ಮಾಡುತ್ತಿರುವ ಸಂಗತಿ ಗೊತ್ತಾದ ಮೇಲೆ ಇವನಿಗೆ ಗುಪ್ತಚರ ಮಂಚಣ್ಣ ಎಂದು ಕರೆಯಲಾಯಿತು. ಲಿಂಗಾಯತ ಶರಣನಾಗಿದ್ದ ಮಂಚಣ್ಣನವರ ಹೆಂಡತಿ ಲಕ್ಷ್ಮಮ್ಮ ಮಹಾಮನೆಯಲ್ಲಿ ತನ್ನ ವರ್ಗ ವರ್ಣ ಜೇಷ್ಠ ಶ್ರೇಷ್ಠತೆಯನ್ನು ಬಿಟ್ಟು ಅತ್ಯಂತ ಧನ್ಯತಾ ಭಾವದಿಂದ ಮಹಾಮನೆಯಲ್ಲಿ ಅಡುಗೆಯ ಕಾರ್ಯಕ್ಕೆ ಅಣಿಯಾಗುತ್ತಿದ್ದಳು. ಅವಳು ಒಬ್ಬ ವಚನಕರ್ತೆಯಾಗಿದ್ದಳು. ಇದರಿಂದ ಒಳಗೊಳಗೇ ಅಸಮಾಧಾನದಿಂದ ಕುದಿಯುತ್ತಿದ್ದ ಶೈವ ಬ್ರಾಹ್ಮಣರು, ಕಲ್ಯಾಣದ ಕ್ಷಿಪ್ರ ಕ್ರಾಂತಿಯ ಸೂತ್ರಧಾರ ಕೊಂಡೆ ಮಂಚಣ್ಣ ಎಂಬ ಅಪಪ್ರಚಾರ ಮಾಡ ಹತ್ತಿದರು. ಹೀಗಾಗಿ ಯಾರೋ ಹೂಡಿದ ಕುತಂತ್ರಕ್ಕೆ ಶರಣ ಭಕ್ತ ಕೊಂಡೆ ಮಂಚಣ್ಣನವರು ಶರಣ ಸಂಸ್ಕೃತಿ ಮತ್ತು ಚರಿತ್ರೆಯಲ್ಲಿ ಖಳನಾಯಕವಾದ ದುರಂತ ಸಂಗತಿ ಇನ್ನು ಮುಂದಾದರೂ ಸರಿ ಪಡಿಸಬೇಕಾದದ್ದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಲ್ಲವೇ ?

ಲೇಖನ
– ಡಾ. ಶಶಿಕಾಂತ ಪಟ್ಟಣ.
ರಾಮದುರ್ಗ – ಪುಣೆ

# ರಾಣಿ ಜೇನಿನ ಜೇನು ಸವಿಯುತ

■ ಉದಯರಶ್ಮಿ ದಿನಪತ್ರಿಕೆ

ನನ್ನೊಲವಿನ ರಾಣಿ,

ನನ್ನ ಅತಿಯಾದ ತುಂಟತನಕ್ಕೆ ನಿನ್ನ ಸೌಂದರ್ಯದ ಲಾವಣ್ಯ ಮತ್ತು ಮೃದು ಸ್ವಭಾವ ಒಂದು ಹೊಸ ಅರ್ಥವನ್ನು ತಂದುಕೊಟ್ಟಿತು. ನಿನ್ನ ಆ ಸುಂದರವಾದ, ಕಾಡಿಗೆ ಹಚ್ಚದಿದ್ದರೂ ಹೊಳೆಯುವ ದೊಡ್ಡ ಜಿಂಕೆಯ ಕಣ್ಣುಗಳು, ಚಂದ್ರನ ಬಿಂಬದಂತಿ-ರುವ ವಿಶಾಲವಾದ ಹಣೆ, ನಿನ್ನ ಕೆನ್ನೆಯ ಮೇಲೆ ಬೀಳುವ ಆ ಮುದ್ದಾದ ಸುಳಿ ಮುಗುಳ್ನಗೆ ಮತ್ತು ನವಿಲಿನ ಗರಿಯಂತೆ ತೂಗಾಡುವ ನಿನ್ನ ಕಪ್ಪನೆಯ ಉದ್ದನೆಯ ರೇಷ್ಮೆಯಂತಹ ಕೂದಲು.. ಇವುಗಳನ್ನು ನೋಡುವಾಗಲೆಲ್ಲಾ ನನ್ನ ಎದೆಯ ಬಡಿತ ನಿಲ್ಲದಂತೆ ಹೆಚ್ಚಾಗುತ್ತದೆ. ನೀನು ಕೇವಲ ಸುಂದರಿಯಲ್ಲ, ನೀನು ನನ್ನ ಪ್ರತಿಯೊಂದು ಉಸಿರನ್ನು ಆಳುವ ದೇವತೆ. ನಿನ್ನ ಸಂಪಿಗೆ ಯಂತಹ ತೀಕ್ಷ್ಣ ಮೂಗು ಮತ್ತು ಕೆಂಪನೆಯ ಗಲ್ಲಗಳು ನನ್ನ ಹೃದಯವನ್ನು ಸಂಪೂರ್ಣವಾಗಿ ಕರಗಿಸಿಬಿಡುತ್ತವೆ. ಬಾಲ್ಯದಲ್ಲಿ ಕೆಸರಲ್ಲಿ ಆಡುತ್ತಾ, ಕಳ್ಳ-ಪೋಲೀಸ್ ಆಟವಾಡುತ್ತಾ, ಹಳ್ಳದ ದಡದಲ್ಲಿ ಚಿನ್ನಿ ದಾಂಡು ಆಡುತ್ತಾ, ಮರ ಹತ್ತಿ ಹಣ್ಣು ಕದಿಯುತ್ತಾ



ಜೊತೆಯಾಗಿ ಬೆಳೆದ ನಾವು, ಹದಿಹರೆಯದ ಹ-ರಿವಿನ ಹೊಸ್ತಿಲಿಗೆ ಬಂದಾಗ ನಮ್ಮ ನಡುವಿನ ಆ ನಿಷ್ಕಲ್ಮಷ ಗೆಳೆತನ ಯಾವಾಗ ಗಾಢವಾದ ಪ್ರೇಮವಾಗಿ ಬದಲಾಯಿತು ಎಂದು ನಮಗೆ ತಿಳಿಯಲೇ ಇಲ್ಲ.

ನನ್ನ ಪ್ರೀತಿಯ ಜೀವವೇ, ನನ್ನ ಬಾಲ್ಯದ ಗೆಳತಿಯೇ, ನಿನ್ನನ್ನು ನೆನಪಿಸಿಕೊಂಡರೆ ಸಾಕು, ನನಗೆ ಆ ಬಯಲುಸೀಮೆಯ ಆ ವಿಶಾಲವಾದ ಮುಕ್ತ ಆಕಾಶ, ಕಣ್ಣು ಹಾಯಿಸಿದಷ್ಟೇ ಕಾಣುವ ಒಣ ಭೂಮಿ, ಸುತ್ತಲೂ




ಹರಡಿರುವ ಕಳ್ಳಿ ಬೇಲಿಗಳು, ಒಣಗಿದ ಹುಲ್ಲಿನ ಮೈದಾನಗಳು ಮತ್ತು ಸಂಜೆಯ ತಂಗಾಳಿ ನನಗೆ ಅದ್ಭುತ ಕವಿತೆಯಂತೆ ಭಾಸವಾಗುತ್ತದೆ. ನೀನು ಆ ಕಠಿಣ ಬಯಲುಸೀಮೆಯ ಬಂಜರು ನೆಲದಲ್ಲಿ ಹಠಾತ್ತನೆ ಅರಳಿದ ಕಮಲದಂತಿರುವೆ. ಪ್ರಕೃತಿಯ ಒಂದು ಸುಂದರ ವಿಸ್ಮಯ. ನಮ್ಮೆದುರಿನ ಆ ತೀಕ್ಷ್ಣ ಬಿಸಿಲು, ಕಾಲಿಗೆ ಹತ್ತುವ ಕೆಮ್ಮಣ್ಣಿನ ರಸ್ತೆಗಳು, ಮುಳ್ಳಿನ ಗಿಡಗಳು ಮತ್ತು ದೂರದಲ್ಲಿ ಧೂಳಿನ ನಡುವೆ ಮರೆಯಾಗುವ ಬೆಟ್ಟಗಳ ಸಾಲು. ನಾವಿಬ್ಬರು ಜೊತೆಯಾಗಿ ಕಳೆದ ಬಾಲ್ಯದ ದಿನಗಳಿಗೆ ಮೂಕ ಸಾಕ್ಷಿಯಾಗಿ ನಿಂತಿವೆ.

ಪ್ರಕೃತಿ ದೇವಿಯ ಮಡಿಲಲ್ಲಿ ಅರಳಿದ ಅಪರೂಪದ ಅಪ್ರತಿಮ ಪ್ರೇಮ ಕಥೆ ನಮ್ಮದು ಅಂತ ಹೇಳಿದರೆ ರೂಪವತಿಯಾದ ರೂಪಾ ಎಂದು ಹೆಸರಿರುವ ನಿನಗೂ ಒಂದು ಮೆರಗು. ಆ ಸವಿ ನೆನಪುಗಳನ್ನು, ಅಂದಿನ ಸಿಹಿ ಕ್ಷಣಗಳನ್ನು ಮತ್ತು ನಮ್ಮಿಬ್ಬರ ಬಾಲ್ಯದ ಮಧುರ ದಿನಗಳನ್ನು ನೆನಪಿಸಿಕೊಳ್ಳದ ದಿನಗಳಿಲ್ಲ ಗೆಳತಿ. ನನ್ನ ಹೃದಯದ ಆಳದಿಂದ ಬರೆಯುತ್ತಿರುವ ಈ ಸುದೀರ್ಘ ಪ್ರೇಮ ಕಾವ್ಯ ನಿನಗಾಗಿ...

ಬಿರುಗಾಳಿ ಬೀಸುವ ಆ ಬಯಲು ನೆಲದಲ್ಲಿ, ಮೃದುವಾಗಿ ಬೀಸುವ ಹಿತವಾದ ತಂಗಾಳಿಯಂತೆ ನಿನ್ನ ನಡಿಗೆಯಿದೆ. ಸೂರ್ಯನ ತೀಕ್ಷ್ಣ ಕಿರಣಗಳು ಹೊಲದ ಬಂಗಾರದಂಥ ಜೋಳದ ಬೆಳೆಗಳ ಮೇಲೆ ಬಿದ್ದಾಗ ಹೇಗೆ ಹೊಳೆಯುತ್ತವೆಯೋ, ಹಾಗೆಯೇ ನಿನ್ನ ಮುಖದ ಮೇಲಿನ ನಿಷ್ಕಲ್ಮಷ ನಗುವಿನಲ್ಲಿ ನನ್ನ ಇಡೀ ಬದುಕು ಬೆಳಗುತ್ತಿದೆ. ನಿನ್ನ ಹೆಜ್ಜೆಯ ಸದ್ದು ಕೇಳಿದರೆ ಸಾಕು, ಈ ಒಣ ಭೂಮಿಯಲ್ಲೂ ಮಲ್ಲಿಗೆಯ ಸುಗಂಧ ಹರಡಿದಂತೆ ಭಾಸವಾಗುತ್ತದೆ. ನಮ್ಮ ಹಳ್ಳಿಯ ಬಾವಿಯ ದಡ, ಆ ಹರಡಿದ ಆಲದ ಮರಗಳು ನಮ್ಮ ಪ್ರೀತಿಯ ಮೌನ ಸಾಕ್ಷಿಗಳು.

ನಮ್ಮ ಬಾಲ್ಯದ ಆಟದ ದಿನಗಳಿಂದ ಹಿಡಿದು ಇಂದಿನವರೆಗೂ, ನಾವು ಹಂಚಿಕೊಂಡಿರುವ ಪ್ರತಿಯೊಂದು ಕ್ಷಣವೂ ನನ್ನ ಪಾಲಿಗೆ ದೇವಲೋಕದ ಅಮೃತವೇ ಸರಿ. ಅಂದು ಸದಾ ತುಂಟತನದಿಂದ, ನಿನ್ನ ಜುಟ್ಟು ಎಳೆದು ಓಡಿಹೋಗುತ್ತಿದ್ದ, ನಿನ್ನ ಕಣ್ಣೀರಿಗೆ ಕಾರಣವಾಗುತ್ತಿದ್ದ ಆ ಕಡುಗಪ್ಪನೆಯ ಕಣ್ಣುಗಳ, ಎತ್ತರದ, ಗಂಭೀರ ನಡಿಗೆಯ ಚೂರು ಹಠಮಾರಿ ಹುಡುಗ ನಾನಾಗಿದ್ದೆ. ಊರಿನವರೆಲ್ಲ ನನ್ನ ತುಂಟತನಕ್ಕೆ ಬೈಯುತ್ತಿದ್ದಾಗ, ನನ್ನ ಪರವಾಗಿ ನಿಂತು ವಾದಿಸುತ್ತಿದ್ದವಳು ನೀನೇ. ನಾನು ಎಷ್ಟೇ ಕೋಪದಲ್ಲಿದ್ದರೂ ನಿನ್ನ ಒಂದು ಮುಗುಳ್ನಗೆ ನನ್ನನ್ನು ಶಾಂತಗೊಳಿಸುತ್ತಿತ್ತು. ಹಠಮಾರಿ ಮತ್ತು ಯಾರಿಗೂ ಬಗ್ಗದ ಸ್ವಭಾವ ನನ್ನದಾಗಿದ್ದರೂ, ನಿನ್ನ ಕಣ್ಣ ನೋಟಕ್ಕೆ



ನಾನು ಯಾವಾಗಲೂ ಸೋಲುತ್ತಿದ್ದೆ.

ಆ ದಿನವಂತೂ ನನ್ನ ಜೀವನದ ಅತ್ಯಂತ ಸುಂದರವಾದ, ಎಂದಿಗೂ ಮರೆಯಲಾಗದ ಸುವರ್ಣಾಕ್ಷರಗಳ ದಿನ. ನಮ್ಮೂರಿನ ಆ ಹಳೆಯ ಪಾರ್ಕಿನ ಒಂಟಿ ಆಲದ ಮರದ ಕೆಳಗೆ, ಸಂಜೆಯ ಕೆಂಬೆಳಕು ಮೂಡುತ್ತಿದ್ದ ಆ ಮಬ್ಬು ಹೊತ್ತಿನಲ್ಲಿ ನಾವಿಬ್ಬರು ಭೇಟಿಯಾದಾಗ, ಜಗತ್ತಿನ ಎಲ್ಲ ಶಬ್ದಗಳೂ ಅಡಗಿ, ಕಾಲವೇ ಒಂದು ಕ್ಷಣ ಸ್ತಬ್ಧವಾಗಿತ್ತು. ಹಳೆಯ ಗೆಳೆತನದ ಎಲ್ಲ ಮಿತಿಗಳನ್ನು ಮೀರಿ, ಮೊದಲ ಬಾರಿಗೆ ಐ ಲವ್ ಯೂ ಎಂದು ಒಬ್ಬರ ಕಿವಿಯಲ್ಲಿ ಇನ್ನೊಬ್ಬರ ಪಿಸುಗುಟ್ಟುತ್ತ ಪರಸ್ಪರರನ್ನು ಗಟ್ಟಿಯಾಗಿ ಆಲಿಂಗಿಸಿದೆವು. ನಿನ್ನ ಉಸಿರಿನ ಬಿಸಿ ನನ್ನ ಮುಖಕ್ಕೆ ತಗುಲಿದಾಗ ಜಗವೇ ಮರೆಯಾಯಿತು. ನಮ್ಮಿಬ್ಬರ ಅಧರಗಳು ಹತ್ತಿರ ಬಂದು, ಅದರತೊಡಗಿದವು. ಮೊದಲ ಬಾರಿಗೆ ಪರಸ್ಪರರ ಅಧರಗಳು ಒಂದರ ಮೇಲೊಂದು ಮುದ್ರೆಯನ್ನೊತ್ತಿದವು. ರಾಣಿಜೇನಿನ ಸಿಹಿಗೆ ಅಧರ ಹಾಕಿದ ಆ ಸುಂದರ ಕ್ಷಣ, ನನ್ನ ಇಡೀ ಜೀವನದ ಅತ್ಯಂತ ಸಿಹಿಯಾದ ಮೈಲಿಗಲ್ಲು.

ಅಂದು ನನ್ನ ತುಟಿಗಳ ಮೇಲೆ ಅರಳಿದ ಆ ಮೊದಲ ಎಳೆಯ ಮುತ್ತು, ನಮ್ಮ ಬಾಲ್ಯದ ಗೆಳೆತನಕ್ಕೆ ಪ್ರೀತಿಯ ಪಟ್ಟಾಭಿಷೇಕ ಮಾಡಿತ್ತು. ಮತ್ತು ನಮ್ಮ ಪ್ರೀತಿಯ ಆಳವನ್ನು ಜಗತ್ತಿಗೆ ಸಾರಿತ್ತು. ಆ ಪುಟ್ಟ ಮುತ್ತಿನ ಸಿಹಿ ಇಂದಿಗೂ ನನ್ನ ತುಟಿಗಳ ಮೇಲೆ



ಹಾಗೇ ಹಸಿರಾಗಿದೆ. ಅದು ಕೇವಲ ಎರಡು ದೇಹಗಳ ಮಿಲನವಾಗಿರಲಿಲ್ಲ, ಎರಡು ಆತ್ಮಗಳ ಶಾಶ್ವತ ಬಂಧನವಾಗಿತ್ತು. ಅಂದು ನಿನ್ನ ಮುಖದಲ್ಲಿ ಮೂಡಿದ ನಾಚಿಕೆಯ ಕೆಂಪು ಬಣ್ಣ ಇಂದಿಗೂ ನನ್ನ ಕಣ್ಣ ಮುಂದೆ ಹಾಗೇ ಇದೆ.ಆ ಮಧುರ ದಿನದಿಂದ ಇಂದಿನವರೆಗೆ ಪ್ರತಿಯೊಂದು ಕ್ಷಣವೂ, ಪ್ರತಿಯೊಂದು ಉಸಿರಲ್ಲೂ ನಾನು ನಿನ್ನನ್ನೇ ಆರಾಧಿಸುತ್ತಿದ್ದೇನೆ. ನಿನ್ನ ಪ್ರೀತಿಯೇ ನನ್ನನ್ನು ಒಬ್ಬ ಜವಾಬ್ದಾರಿಯುತ, ಸುಂದರ ಮನಸ್ಸಿನ ಗಂಡಸನ್ನಾಗಿ ರೂಪಿಸಿದೆ.

ನಿನ್ನ ಕಣ್ಣಲ್ಲಿ ನನಗಾಗಿ ಇರುವ ಪ್ರೀತಿಯನ್ನು ಕಂಡಾಗ ನಾನೇ ಈ ಪ್ರಪಂಚದ ಅತ್ಯಂತ ಅದೃಷ್ಟವಂತ ಪುರುಷ ಎಂದು ಹೆಮ್ಮೆಯಾಗುತ್ತದೆ. ಬಾಲ್ಯದ ನಿಷ್ಕಲ್ಮಷ ಸ್ನೇಹಿತರಾಗಿದ್ದ ನಾವಿಬ್ಬರು, ಇಂದು ಇಡೀ ಜೀವನವನ್ನು ಪತಿಯಾಗಿ ಮತ್ತು ಪತ್ನಿಯಾಗಿ ಜೊತೆಯಾಗಿ ಕಳೆಯಲು ಪವಿತ್ರ ಹೆಜ್ಜೆಯಿಡುತ್ತಿದ್ದೇವೆ. ಮದುವೆಯ ಶುಭಗಳಿಗೆಗಾಗಿ, ನಿನ್ನ ಕೈ ಹಿಡಿದು ಆ ಸಪ್ತಪದಿ ತುಳಿಯುವ ದಿನಕ್ಕಾಗಿ



ಜೀವ ಹಂಬಲಿಸುತ್ತಿದೆ, ಮನಸ್ಸು ತುಡಿಯುತ್ತಿದೆ. ನಮ್ಮ ಹಿರಿಯರ ಆಶೀರ್ವಾದದೊಂದಿಗೆ ನಾವು ಒಂದಾಗುವ ಆ ಕ್ಷಣ ಹತ್ತಿರ ಬರುತ್ತಿದೆ.

ನನ್ನ ಪ್ರತಿಯೊಂದು ಕನಸಿನಲ್ಲೂ, ಭವಿಷ್ಯದ ಪ್ರತಿಯೊಂದು ಪುಟದಲ್ಲೂ ನೀನೇ ಇದ್ದೀಯ. ನಮ್ಮ ಸಂಸಾರದ ಆ ಸುಂದರ ಗೂಡನ್ನು ಕಟ್ಟಲು ನಾನು ಉತ್ಸುಕನಾಗಿದ್ದೇನೆ. ನನ್ನ ಬಾಲ್ಯದ ಗೆಳತಿಯೇ, ಜೀವನದ ಪ್ರತಿಯೊಂದು ಸಂತೋಷವೂ ನೀನೇ. ನನ್ನ ಬಾಳಿಗೆ ಸಿಕ್ಕಿದ ಅತ್ಯಮೂಲ್ಯ ವರವೂ ನೀನೇ. ಸದಾ ನಿನ್ನ ಮುಖದಲ್ಲಿ ನಗುವನ್ನು ಮೂಡಿಸಲು, ನಿನ್ನನ್ನು ರಾಣಿಯಂತೆ ನೋಡಿಕೊಳ್ಳಲು ಕಾತುರದಿಂದ ಕಾಯುತ್ತಿದ್ದೇನೆ. ನೀನು ರಾಣಿಯಾದರೆ ನಾನು ರಾಜನಲ್ಲವೇ? ನಮ್ಮ ಬಯಲುಸೀಮೆಯ ಈ ಪವಿತ್ರ ಮಣ್ಣಿನ ಸಾಕ್ಷಿಯಾಗಿ, ಆ ವಿಶಾಲವಾದ ಆಕಾಶದ ಸಾಕ್ಷಿಯಾಗಿ ನಾನು ನಿನಗೆ ಮಾತು ನೀಡುತ್ತಿದ್ದೇನೆ. ಬಾಲ್ಯದ ಸ್ನೇಹ ವೈವಾಹಿಕ ಜೀವನದ ಮಧುರ ಬಾಂಧವ್ಯಕ್ಕೆ ತಿರುಗುತ್ತಿರುವುದು ನನ್ನ ಪಾಲಿನ ಸೌಭಾಗ್ಯ. ಸಪ್ತಪದಿಯಾದ ಮೇಲೆ ಪ್ರಥಮ ರಾತ್ರಿಗೆ ಸಾವಿರ ಸಾವಿರ ಕನಸು ಕಾಣುವೆ. ಕೊನೆಯ ಉಸಿರಿರುವವರೆಗೂ ಕಣ್ರೆಪ್ಪೆಯಂತೆ ಕಾಯುವೆ. ರಾಣಿ ಜೇನಿನ ಜೇನು ಸವಿಯುತ ಜೀವನ ಸವಿಯಲು ತುದಿಗಾಲಲ್ಲಿ ಕಾದಿರುವೆ.

**ನಿನ್ನೊಲವಿನ ರಾಜ್ (ರಾಜು)**

**ಲೇಖನ**
**– ಜಯಶ್ರೀ.ಜೆ. ಅಬ್ಬಿಗೇರಿ.**
**ಇಂಗ್ಲೀಷ್ ಉಪನ್ಯಾಸಕರು**
**ಬೆಳಗಾವಿ**
**ಮೊ: 9449234142**



## ಭಾವೈಕ್ಯತೆ ಬಿತ್ತಿದ ಮಹಾನ್ ಸಂತ ಡಾ.ಅಪ್ಪ



ಕಲಬುರಗಿ:ಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರು ಕಲ್ಯಾಣ ಕರ್ನಾಟಕ ಭಾಗದಲ್ಲಿ ಭಾವೈಕ್ಯತೆ ಮತ್ತು ಕೋಮು ಸೌಹಾರ್ದತೆಯನ್ನು ಗಟ್ಟಿಗೊಳಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದ್ದ ಮಹಾನ್ ಸಂತ ಎಂದು ನಿವೃತ್ತ ಪ್ರಾಧ್ಯಾಪಕ ಪ್ರೊ.ಕ್ಷೇಮಲಿಂಗ ಬಿರಾದಾರ ಹೇಳಿದರು. ಅಖಿಲ ಭಾರತ ಶಿವಾನುಭವ ಮಂಟಪ ಶರಣಬಸವೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದಲ್ಲಿ 40 ದಿನಗಳ ಉಪನ್ಯಾಸ ಮಾಲಿಕೆಯಲ್ಲಿ ಗುರುವಾರ ಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರ ಭಾವೈಕ್ಯತೆಯ ದಾಸೋಹ ಎಂಬ ವಿಷಯ ಕುರಿತು ಮಾತನಾಡಿದರು.

ಕಲಬುರಗಿಯು ಸೂಫಿ ಮತ್ತು ಶರಣ ಪರಂಪರೆಗಳ ಸಂಗಮದ ನೆಲೆಯಾಗಿದ್ದು, ಶರಣಬಸವೇಶ್ವರ ಸಂಸ್ಥಾನ ಮತ್ತು ಖ್ವಾಜಾ ಬಂದೇ ನವಾಜ್ ಸಂಸ್ಥಾನಗಳ ಸೇವಾ ಪರಂಪರೆಗಳು ಈ ಪ್ರದೇಶದ ಸೌಹಾರ್ದ ವಾತಾವರಣಕ್ಕೆ ಕೊಡುಗೆ ನೀಡಿವೆ. ಪೂಜ್ಯ ಡಾ.ಅಪ್ಪ ಅವರು ಧರ್ಮ, ಜಾತಿ ಮತ್ತು ವರ್ಗಗಳ ಭೇದವಿಲ್ಲದೆ ಎಲ್ಲರನ್ನೂ ಒಂದೇ ಆಗಿ ಕಾಣುವ ಅವರ ವಿಶಾಲ ಮನೋಭಾವ ಈ ಭಾಗದ ಸೌಹಾರ್ದತೆಗೆ ಸಾಕ್ಷಿಯಾಗಿತ್ತು. ಅವರು ಕೇವಲ ಒಂದು ಧರ್ಮಕ್ಕೆ ಸೀಮಿತವಾಗದೆ, ಸರ್ವಧರ್ಮ ಸಮನ್ವಯತೆಯನ್ನು ಬಲವಾಗಿ ಪ್ರತಿಪಾದಿಸಿದರು. ಅವರ ದಾಸೋಹ ಸಂಸ್ಥಾನದ ಬಾಗಿಲುಗಳು ಜಾತಿ-ಮತ ಭೇದವಿಲ್ಲದೆ ಎಲ್ಲರಿಗೂ ಸದಾ ತೆರೆದಿರುತ್ತಿದ್ದವು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿ ಮಾಡಿದ ಅವರು, ಸಮಾಜದ ಹಿಂದುಳಿದ, ಬಡ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಮಕ್ಕಳಿಗೆ ಉನ್ನತ ಶಿಕ್ಷಣ ಸಿಗುವಂತೆ ಮಾಡಿದರು. ಜಾತಿಯ ಸಂಕೋಲೆಗಳನ್ನು ಮೀರಿ ಮಹಿಳೆಯರು ಸ್ವಾವಲಂಬಿಗಳಾಗಲು ಮೊದಲ ಮಹಿಳಾ ಇಂಜಿನಿಯರಿಂಗ್ ಕಾಲೇಜು ಸೇರಿದಂತೆ ಹಲವು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಶರಣಬಸವೇಶ್ವರ ಸಂಸ್ಥಾನದ ಮಹಾದಾಸೋಹದಲ್ಲಿ ಯಾವುದೇ ಜಾತಿ, ಭೇದ ಇರಲಿಲ್ಲ. ಶ್ರೀಮಂತ-ಬಡವ, ಮೇಲ್ಜಾತಿ-ಕೆಳಜಾತಿ ಎಂಬ ಭೇದಭಾವವಿಲ್ಲದೆ ಎಲ್ಲರೂ ಒಂದೇ ಕಡೆ ಕುಳಿತು ಪ್ರಸಾದ ಸ್ವೀಕ-ರಿಸುವ ಮೂಲಕ ಸಾಂಸ್ಕೃತಿಕ ಹಾಗೂ ಸಾಮಾಜಿಕ ಭಾವೈಕ್ಯತೆಯನ್ನು ಇವರು ಸಾಕಾರಗೊಳಿಸಿದ್ದರು.

ಪೂಜ್ಯರು ಬರೆದ 'ಮಹಾದಾಸೋಹ ಸೂತ್ರಗಳು' ಮತ್ತು ಶರಣರ ತತ್ವಗಳು ಕೇವಲ ಆಧ್ಯಾತ್ಮಿಕ ಬೋಧನೆಗಳಾಗಿರದೆ, ಮಾನವೀಯತೆ ಮತ್ತು ಸಾಮುದಾಯಿಕ ಒಗ್ಗಟ್ಟನ್ನು ಬಲಪಡಿಸುವ ಸೂತ್ರಗಳಾಗಿದ್ದವು. ಅವರ ಇಡೀ ಜೀವನವು "ಕಾಯಕವೇ ಕೈಲಾಸ" ಮತ್ತು "ದಾಸೋಹ" ಪರಿಕಲ್ಪನೆಯಡಿ ಸಮಾಜದ ಎಲ್ಲಾ ವರ್ಗದ ಜನರನ್ನು ಒಗ್ಗೂಡಿಸುವ ಒಂದು ಮಹತ್ತರವಾದ ಭಾವೈಕ್ಯತೆಯ ಪಯಣವಾಗಿತ್ತು ಎಂದು ಹೇಳಿದರು.

## ಪರಿಸರ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ : ಸುಹಾಸ್ ಖಣಗೆ

ಕಲಬುರಗಿ: ಇಂದಿನ ಜಾಗತಿ-ಕ ದಿನಮಾನಗಳಲ್ಲಿ ಪರಿಸರ ಮಾಲಿನ್ಯ ದಿನೆ ದಿನೇ ಹೆಚ್ಚಾಗುತ್ತಿದೆ. ಆ ಪರಿಸರ ಮಾಲಿನ್ಯದ ಕೆಲ ಅಂಶವನ್ನಾದರೂ ಕಡಿಮೆ ಮಾಡಲು ನಾವು ಪರಿಸರ ಸ್ನೇಹಿ ಗಣೇಶನನ್ನು ಪ್ರತಿಷ್ಠಾಪಿಸಿ ಬೇಕು ಎಂದು ಸುಹಾಸ್ ಖಣಗೆ ಅವರು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ನಗರದ ನೂತನ ವಿದ್ಯಾಲಯ ಪದವಿ ಮಹಾವಿದ್ಯಾಲಯದ ಐಕ್ಯೂಎಸಿ ಸಹಯೋಗದೊಂದಿಗೆ ಲಲಿತಕಲಾ ವಿಭಾಗದ ವತಿಯಿಂದ ಪರಿಸರ ಸ್ನೇಹಿ ಗಣೇಶ ಮೂರ್ತಿ ತಯಾರಿಕೆ ಹಾಗೂ ಮಾರಾಟ ಕಾರ್ಯಾಗಾರವನ್ನು ಉದ್ಘಾಟಿಸಿದ ನೂತನ ವಿದ್ಯಾಲಯ ಸಂಸ್ಥೆಯ ಕ್ರೀಡಾ ಸಮಿತಿಯ ಅಧ್ಯಕ್ಷ ಸುಹಾಸ್ ಖಣಗೆ ಅವರು ಗಣೇಶ ಹಬ್ಬದ ಆ ಚರಣೆ ಆಡಂಬರದಿಂದ ಕೂಡಿರದೆ ಸರಳವಾಗಿ ಹಾಗೂ ಸಮಾಜಮುಖಿ ನೆಲೆಯಲ್ಲಿರಬೇಕು. ಅದಕ್ಕಾಗಿ ಮನೆಗಳಲ್ಲಿ ಇಂಥಹ ಪರಿಸರ ಸ್ನೇಹಿ ಗಣೇಶನನ್ನು ಪ್ರತಿಷ್ಠಾಪಿಸುವ ಅವಶ್ಯಕತೆ ಇದೆ ಎಂದು ಸಾರಿದರು. ಕಲಬುರಗಿಯ ಶಿಲ್ಪಕಲಾವಿದರಾದ ಶ್ರೀ ರಮೇಶ ಪಿ. ಬಡಿಗೇರ ಅವರು ಪರಿಸರ ಸ್ನೇಹಿ ಗಣೇಶ ಮೂರ್ತಿ ತಯಾರಿಕೆಯ ಪ್ರಾತ್ಯಕ್ಷಿಕೆಯನ್ನು ನೀಡಿದರು. ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ದಯಾನಂದ ಎಂ. ಶಾಸ್ತ್ರಿ ಅವರು ಬಾಲಗಂಗಾಧರ ತಿಲಕರು ಜನಸಾಮಾನ್ಯರಲ್ಲಿ ರಾಷ್ಟ್ರೀಯ ಐಕ್ಯತೆಯನ್ನು ಬಲಪಡಿಸಲು ಗಣೇಶ ಚತುರ್ಥಿಯನ್ನು ಆರಂಭಿಸಿದರು ಎಂದು ಗಣೇಶ ಚತುರ್ಥಿಯ ಹಿನ್ನೆಲೆಯನ್ನು ಹೇಳಿದರು. ವೇದಿಕೆಯಲ್ಲಿ ಮಹಾವಿದ್ಯಾಲಯದ ನಿರ್ದೇಶಕ ಗೋವಿಂದ ಪೂಜಾರ್ ರವರು ಉಪಸ್ಥಿತರಿದ್ದರು.

## ಸಾಮಾಜಿಕ ಪರಿವರ್ತನೆಯ ಹರಿಕಾರ ಬ್ರಹ್ಮಶ್ರೀ ನಾರಾಯಣ ಗುರು

ಕಲಬುರಗಿ: ತುಳಿತಕ್ಕೆ ಒಳಗಾದ ಶೋಷಿತರು, ದೀನರು, ಬಡವರ ಉದ್ಧಾರವನ್ನು ಮಾಡುತ್ತಾ, ಜಾತೀಯತೆ, ಅಸ್ಪೃಶ್ಯತೆ ನಿರ್ಮೂಲನೆಯಂತಹ ಮುಂತಾದ ಸಮಾಜ ಸುಧಾರಣೆಯ ಕಾರ್ಯಗಳನ್ನು ಮಾಡಿದ ಬ್ರಹ್ಮಶ್ರೀ ನಾರಾಯಣ ಗುರು ಶ್ರೇಷ್ಠ ಸಮಾಜ ಸುಧಾರಕರು, ಮಹಾನ ಮಾನವತಾವಾದಿ, ತತ್ವಜ್ಞಾನಿಯಾಗಿ ಸಮಾಜ-ಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡುವ ಮೂಲಕ ಸಾಮಾಜಿಕ ಪರಿವರ್ತನೆಯ ಹರಿಕಾರರಾಗಿದ್ದಾರೆ ಎಂದು ಉಪನ್ಯಾಸಕ ಎಚ್.ಬಿ.ಪಾಟೀಲ ಅಭಿಪ್ರಾಯಪಟ್ಟರು. ನಗರದ ಗಂಗಾ ನಗರದಲ್ಲಿರುವ 'ಸ್ವಾಮಿ ವಿವೇಕಾನಂದ ಪ್ರೌಢಶಾಲೆ'ಯಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ 'ಬ್ರಹ್ಮಶ್ರೀ ನಾರಾಯಣ ಗುರುಗಳ ಜಯಂತಿ'ಯ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪ ನಮನಗಳನ್ನು ಸಲ್ಲಿಸಿ ಅವರು ಮಾತನಾಡುತ್ತಿದ್ದರು.

ನಾರಾಯಣ ಗುರು ಅವರು "ಒಂದು ಜಾತಿ, ಒಂದು ಧರ್ಮ ಮತ್ತು ಎಲ್ಲಾ ಮಾನವರಿಗೆ ಒಂದೇ ದೇವರು" ಎಂಬ ತತ್ವವನ್ನು ಬೋಧಿಸಿದರು. ಅವರು 1888ರಲ್ಲಿ ಕೇರಳದ ಅರುವಿಪ್ಪುರಂನಲ್ಲಿ ಶಿವನ ವಿಗ್ರಹವನ್ನು ಪ್ರತಿಷ್ಠಾಪಿಸಿ, ಕೆಳವರ್ಗದವರಿಗೂ ಪೂಜೆಯ ಹಕ್ಕಿದೆ ಎಂದು ಸಾರಿದರು. ಕಳವಂಕೋಡನಲ್ಲಿ ನಿರ್ಮಿಸಿದ ದೇವಾಲಯದಲ್ಲಿ ವಿಗ್ರಹದ ಬದಲಿಗೆ ಕನ್ನಡಿಗಳನ್ನು ಇರಿಸಿ, ಪ್ರತಿಯೊಬ್ಬರೊಳಗೆ ದೈವಿಕ ಶಕ್ತಿ ಇದೆ ಎಂದು ತೋರಿಸಿಕೊಟ್ಟರು. ಶಿಕ್ಷಣದ ಮೂಲಕ ಮಾತ್ರ ಸಮಾಜದಲ್ಲಿ ಬದಲಾವಣೆ ಸಾಧ್ಯ ಎಂದು ನಂಬಿ, ಕೆಳಜಾತಿಗಳ ಮೇಲೆ ನಡೆಯುತ್ತಿದ್ದ ದಬ್ಬಾಳಿಕೆಯನ್ನು ವಿರೋಧಿಸಿದರು ಎಂದು ವಿವರಿಸಿದರು.

## ನುಲಿಯ ಚಂದಯ್ಯನವರ ಕೊಡುಗೆ ಅನನ್ಯ

ಕಲಬುರಗಿ : ನೂಲಿಯ ಚಂದಯ್ಯನವರು ಕನ್ನಡದ ಒಬ್ಬ ಪ್ರಮುಖ ವಚನಕಾರರು. 12 ನೇ ಶತಮಾನದಲ್ಲಿ ಬಸವಣ್ಣನವರ ಸಮಕಾಲೀನರಾಗಿದ್ದರು ಮತ್ತು ಅವರ ಸಾಮಾಜಿಕ ಕ್ರಾಂತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಚಂದಯ್ಯನವರು ಕಾಯಕ ಮತ್ತು ದಾಸೋಹದ ಮಹತ್ವವನ್ನು ಒತ್ತಿಹೇಳಿದರು ಮತ್ತು ಅವರ ವಚನಗಳಲ್ಲಿ ಆಚರಣೆ ಮತ್ತು ನೈಜ ಭಕ್ತಿಯ ವಚನಗಳ ಮೂಲಕ ಅನನ್ಯವಾದ ಕೊಡುಗೆಯನ್ನು ನೀಡಿದ್ದಾರೆ ಎಂದು ಉಪನ್ಯಾಸಕ ಎಚ್.ಬಿ.ಪಾಟೀಲ್ ಹೇಳಿದರು. ನಗರದ ಜೆ.ಆರ್ ನಗರದಲ್ಲಿನ 'ಸಕ್ಸಸ್ ಕಂಪ್ಯೂಟರ್ ತರಬೇತಿ ಕೇಂದ್ರ'ದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದಿಂದ ಶನಿವಾರ ಜರುಗಿದ 'ನೂಲಿಯ ಚಂದಯ್ಯನವರ ಜಯಂತಿ'ಯಲ್ಲಿ ಅವರು ಮಾತನಾಡುತ್ತಿದ್ದರು.

ನುಲಿಯ ಚಂದಯ್ಯನವರು ಮೂಲತಃ ವಿಜಯಪುರ ಜಿಲ್ಲೆಯ ಹಿರೇಶಿವಣಗಿ ಗ್ರಾಮದವರು. ಅವರು 1160 ರ ಸುಮಾರಿಗೆ ಕಲ್ಯಾಣದ ಅನುಭವ ಮಂಟಪಕ್ಕೆ ಆಗಮಿಸಿದರು. ಕಲ್ಯಾಣ ಕ್ರಾಂತಿಯ ನಂತರ, ಅವರು ತಮ್ಮ ವಚನಗಳ ಸಂಗ್ರಹದೊಂದಿಗೆ ಅಕ್ಕ ನಾಗಮ್ಮನವರೊಂದಿಗೆ ಉಳವಿ ಕಡೆ ಪ್ರಯಾಣ ಬೆಳೆಸಿದರು. ನಂತರ, ಅವರು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ಬಳಿಯ ಎಣ್ಣೆಹೊಳೆ ಮತ್ತು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯ ನುಲೇನೂರು ಪ್ರದೇಶಗಳಲ್ಲಿ ನೆಲೆಸಿದರು. ಅಲ್ಲಿ ಅವರು ಕಾಯಕ ಮತ್ತು ದಾಸೋಹದಲ್ಲಿ ತೊಡಗಿಸಿಕೊಂಡಿದ್ದರು ಎಂದರು. ಚಂದಯ್ಯನವರ ವಚನಗಳಲ್ಲಿ ಕಾಯಕದ ಮಹತ್ವ, ನಿಜವಾದ ಭಕ್ತಿಯ ಅಗತ್ಯತೆ ಮತ್ತು ಆಡಂಬರದ ಆಚರಣೆಗಳನ್ನು ಟೀಕಿಸಿದ್ದಾರೆ.

## ವಿದ್ಯಾರ್ಥಿಗಳು ಕ್ರೀಡಾಚಟುವಟಿಕೆಗೆ ಸಮಯ ಮೀಸಲಿಡಬೇಕು: ಬಟ್ಟು ಸತ್ಯನಾರಾಯಣ

ಕಲಬುರಗಿ: ರಾಷ್ಟ್ರೀಯ ಕ್ರೀಡಾ ದಿನಾಚರಣೆಯ ಅಂಗವಾಗಿ ಕೇಂದ್ರ ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ ಮೈ ಭಾರತ್ ವತಿಯಿಂದ ಆಯೋಜಿಸಲಾಗಿದ್ದ "ಖೇಲೋ ಇಂಡಿಯಾ ಸಂವಾದ್ ಖೇಲ್ ಕಿ ಬಾತ್, ಪಿಎಂ ಮೋದಿ ಕೆ ಸಾಥ್" ಕಾರ್ಯಕ್ರಮದಲ್ಲಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ (ಸಿಯುಕೆ) ವರ್ಚುವಲ್ ಮುಖಾಂತರ ಭಾಗವಹಿಸಿತು.

ಈ ಸಂದರ್ಭದಲ್ಲಿ ಮಾತನಾಡಿದ ಕುಲಪತಿಗಳಾದ ಪ್ರೊ. ಬಟ್ಟು ಸತ್ಯನಾರಾಯಣ ಅವರು ವಿದ್ಯಾರ್ಥಿಗಳು ತಮ್ಮ ದೈನಂದಿನ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಕಡ್ಡಾಯವಾಗಿ ಯಾವುದಾದರೊಂದು ಕ್ರೀಡೆಯಲ್ಲಿ ಭಾಗವಹಿಸಬೇಕು ಹಾಗೂ ಪ್ರತಿದಿನ ದೈಹಿಕ ಚಟುವಟಿ-ಕೆಗಾಗಿ ಸಮಯವನ್ನು ಮೀಸಲಿಡಬೇಕು ಎಂದು ಕರೆ ನೀಡಿದರು. ಕ್ರೀಡೆ ಮತ್ತು ವ್ಯಾಯಾಮವು ಉತ್ತಮ ಆರೋಗ್ಯವನ್ನು ಕಾಪಾಡುವುದರ ಜೊತೆಗೆ ಏಕಾಗ್ರತೆ, ಆತ್ಮವಿಶ್ವಾಸ ಮತ್ತು ಮಾನಸಿಕ ಸದೃಢತೆಯನ್ನು ಹೆಚ್ಚಿಸುತ್ತದೆ. ಇದರಿಂದ ಶೈಕ್ಷಣಿಕ ಚಟುವಟಿಕೆಗಳಲ್ಲಿಯೂ ಇನ್ನಷ್ಟು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು. ವಿ.ವಿ.ಯಲ್ಲಿ ಲಭ್ಯವಿರುವ ಸುಸಜ್ಜಿತ ಒಳಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣಗಳು, ಜಿಗಳ ಸೌಲಭ್ಯ ಹಾಗೂ ನುರಿತ ತರಬೇತುದಾರರ ಸೇವೆಗಳನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಂಡು ತಮ್ಮ ಆರೋಗ್ಯ ವೃದ್ಧಿ ಮತ್ತು ದೈಹಿಕ ಸಧೃಡತೆಯನ್ನು ಕಾಪಾಡಿಕೊಳ್ಳಬೇಕೆಂದು ಅವರು ಸಲಹೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ದೇಶದ ಯುವಜನರನ್ನು ಉದ್ದೇಶಿಸಿ ನೀಡಿದ ಸ್ಫೂರ್ತಿದಾಯಕ ಸಂದೇಶವು ಯುವ ಸಮುದಾಯ ಫಿಟ್ ಇಂಡಿಯಾ ಮನೋಭಾವವನ್ನು ಅಳವಡಿಸಿಕೊಳ್ಳಲು




ಮತ್ತು ವಿಕಸಿತ ಭಾರತ-2047 ರ ನಿರ್ಮಾಣದ ನಮ್ಮೆಲ್ಲರ ರಾಷ್ಟ್ರೀಯ ಸಂಕಲ್ಪಕ್ಕೆ ಪ್ರತಿಯೊಬ್ಬ ಯುವಕ-ಯುವತಿಯೂ ತಮ್ಮದೇ ಆದ ಕೊಡುಗೆ ನೀಡಲು ಮತ್ತಷ್ಟು ಪ್ರೇರಣೆ ನೀಡುತ್ತದೆ ಎಂದು ಕುಲಪತಿಗಳು ಹೇಳಿದರು.

ಕಾನೂನು ಅಧ್ಯಯನ ಮತ್ತು ವಿದ್ಯಾರ್ಥಿ ಕಲ್ಯಾಣದ ಡೀನ್ ಪ್ರೊ.ಬಸವರಾಜ ಎಂ ಕುಬಕಡ್ಡಿ ಅವರು ಮಾತನಾಡಿ ಆರೋಗ್ಯವೇ ಭಾಗ್ಯವಾಗಿದ್ದು, ವಿದ್ಯಾರ್ಥಿಗಳು ಶೈಕ್ಷಣಿಕ ಚಟುವಟಿಕೆಯ ಜೊತೆಗೆ ಕ್ರೀಡಾ ಚಟುವಟಿಕೆಗಳಲ್ಲಿಯೂ ಸಹ ಸಕ್ರೀಯವಾಗಿ ಭಾಗವಹಿಸಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ವಿ.ವಿ.ಯ ಕ್ರೀಡಾ ವಿಭಾಗದ ನೂತನ ವೆಸೈನ್ನು ಕುಲಪತಿಗಳು ಅನಾವರಣಗೊಳಿಸಿದರು. ರಾಜ್ಯ ಮತ್ತು ಜಿಲ್ಲಾ ಮಟ್ಟದ ಬಾಸ್ಕೆಬಾಲ್ ಕ್ರೀಡಾಕೂಟದಲ್ಲಿ ಭಾಗಿಯಾಗಿದ್ದ ಆಟಗಾರರಾದ ಸುರೇಶ್, ಸಿರಾಜುದ್ದೀನ್ ಮತ್ತು ಸಂತೋಷ್ ಅವರನ್ನು ವಿ.ವಿ.ಯಿಂದ ಸನ್ಮಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಮೈ ಭಾರತ್ ಕೇಂದ್ರದ ಜಿಲ್ಲಾ ಸಹಾಯಕ ನಿರ್ದೇಶಕರಾದ ಸುಮೀತ್ ಎಸ್ ಪಾರ್ಕಿ, ದೈಹಿಕಶಿಕ್ಷಣ ವಿಭಾಗದ ನಿರ್ದೇಶಕ ಡಾ.ಎಂ.ಎಸ್.ಪಾಸೋಡಿ, ಕಾರ್ಯಕ್ರಮ ಸಂಯೋಜಕ ಡಾ.ಮಲ್ಲಿಕಾರ್ಜುನ ಹೂಗಾರ, ಕ್ರೀಡಾ ಸಂಯೋಜಕ ಡಾ.ಸಾಯಿ ಅಭಿನವ ಸೇರಿದಂತೆ ವಿವಿಧ ವಿಭಾಗಗಳ ಡೀನರು, ಪ್ರಾಧ್ಯಾಪಕರು ಮತ್ತು ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಯಾಜ್ಞವಲ್ಕ್ಯ ಭವನದಲ್ಲಿ ಉಪಾಕರ್ಮ: ಯಜ್ಞೋಪವೀತ ಧಾರಣೆ

ಕಲಬುರಗಿ: ನಗರದ ಸಂಗಮೇಶ್ವರ ಬಡಾವಣೆಯ ಶ್ರೀ ಸೂರ್ಯನಾರಾಯಣ ದೇವಸ್ಥಾನದ ಯಾಜ್ಞವಲ್ಕ್ಯ ಭವನದಲ್ಲಿ ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯ ಸೇವಾ ಸಮಿತಿ ಆಶ್ರಯದಲ್ಲಿ ಶುಕ್ಲಯಜುರ್ವೇದೀಯರ ಉಪಾಕರ್ಮವನ್ನು ಇಂದು ಬೆಳಿಗ್ಗೆ ಶ್ರಾವಣ ಪೂರ್ಣಿಮೆಯ ಪಾವನ ಸಂದರ್ಭದಲ್ಲಿ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ವೇದಮೂರ್ತಿಗಳಾದ ಹರೀಶಾಚಾರ್ಯ ಹಾಗೂ ಶ್ರೀರಾಮಾಚಾರ್ಯ ಅವರ ಪೌರೋಹಿತ್ಯದಲ್ಲಿ ಗುರುಪರಂಪರೆಯ ಸ್ಮರಣೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ನವಕಾಂಡ ಋಷಿ ಪೂಜೆ, ಗಣಪತಿ ಪೂಜೆ, ಮೃತ್ತಿಕಾಗೋಮಯ ಸ್ನಾನ, ಸಮಿಧಾದಾನ, ಗಾಯತ್ರಿ ಮಂತ್ರದಿಂದ ತಿಲಹೋಮ ಹಾಗೂ ಉತ್ಸರ್ಜನ ಉಪಾಕರ್ಮ ಸೇರಿದಂತೆ ವಿವಿಧ ವೈದಿಕ ವಿಧಿವಿಧಾನಗಳು ಶಾಸ್ತ್ರೋಕ್ತವಾಗಿ ನೆರವೇರಿದವು.

ವೇದಮಂತ್ರಗಳ ಘೋಷದೊಂದಿಗೆ ಸಾಮೂಹಿಕ ಯಜ್ಞೋಪವೀತ ಧಾರಣೆ ಹಾಗೂ ಉಪಾಕರ್ಮಾಂಗ ಹೋಮ ನೆರವೇರಿಸಿ, ವೇದಾಧ್ಯಯನದ ಪುನರಾರಂಭದ ಸಂಕಲ್ಪ ಕೈಗೊಳ್ಳಲಾಯಿತು. ಈ ಸಂದರ್ಭದಲ್ಲಿ ಋಷಿ-ಗುರುಪರಂಪರೆಯ ಸ್ಮರಣೆ ಹಾಗೂ ವೈದಿಕ ಸಂಸ್ಕೃತಿಯ ಸಂರಕ್ಷಣೆಯ ಮಹತ್ವವನ್ನು ಸಾರಲಾಯಿತು.

ಕಾರ್ಯಕ್ರಮದಲ್ಲಿ ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯ ಸೇವಾ ಸಮಿತಿ, ಅಧ್ಯಕ್ಷ ಮಲ್ಹಾರರಾವ ಗಾರಂಪಳ್ಳಿ,



ಕಾರ್ಯದರ್ಶಿ ರಾಘವೇಂದ್ರ ವಕೀಲ ಸೇರಿದಂತೆ ಅಶೋಕ್ ಮಳ್ಳಿ, ಭೀಮಸೇನರಾವ ಸಿಂದಗೇರಿ, ಡಾ.ಉಡುಪಿ ಕೃಷ್ಣ ಜೋಶಿ, ವೆಂಕಟೇಶ ಕುಲಕರ್ಣಿ, ಸುಧೀರ ಕುಲಕರ್ಣಿ, ಭೀಮರಾವ್ ಕುಲಕರ್ಣಿ, ವಿನುತ ಜೋಶಿ, ಶಾಮರಾವ್ ಕುಲಕರ್ಣಿ, ವಾಸುದೇವರಾವ್ ಕುಳಗೇರಿ, ಪ್ರಶಾಂತ ದೀಕ್ಷಿತ್, ದತ್ತಾತ್ರೇಯ ಸಬ್ನವಿಸ್, ಶ್ರೀಧರ ಕುಲಕರ್ಣಿ, ಪ್ರಾಣೇಶಾಚಾರ್ಯ ಬೈಚಬಾಳ, ಜಯಚಾರ್ಯ, ಮಾತಾರ್ಂಡ ಹೇಮನೂರು, ಪ್ರಮೋದ್ ಕುಲಕರ್ಣಿ, ಅಶ್ವತ್ ಜೋಶಿ, ಸತ್ಯನಾರಾಯಣ ಕುಲಕರ್ಣಿ ಸೇರಿದಂತೆ ಸಮಿತಿಯ ಸದಸ್ಯರು ಹಾಗೂ ಭಕ್ತರು ಉಪಸ್ಥಿತರಿದ್ದು, ಧಾರ್ಮಿಕ ವಿಧಿವಿಧಾನಗಳಲ್ಲಿ ಪಾಲ್ಗೊಂಡರು.ವೈದಿಕ ಪರಂಪರೆಯ ಸಂರಕ್ಷಣೆ, ವೇದಾಧ್ಯಯನದ ಪುನಸಂಕಲ್ಪ ಹಾಗೂ ಋಷಿಗುರು ಪರಂಪರೆಗೆ ಗೌರವ ಸಲ್ಲಿಸುವ ಮೂಲಕ ಉಪಾಕರ್ಮ ಕಾರ್ಯಕ್ರಮವು ಭಕ್ತಿಪೂರ್ವಕವಾಗಿ ಸಂಪನ್ನಗೊಂಡಿತು.

## ಬಿ.ಎಂ.ಪಾಟೀಲ್ ಶಾಲೆಯಲ್ಲಿ ರಾಷ್ಟ್ರೀಯ ಕ್ರೀಡಾ ದಿನಾಚರಣೆ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಜಲನಗರದಲ್ಲಿರುವ ಶ್ರೀ ಬಿ. ಎಂ. ಪಾಟೀಲ್ ಪಬ್ಲಿಕ್(ಐಸಿಎಸ್‌ಈ) ಶಾಲೆಯಲ್ಲಿ ರಾಷ್ಟ್ರೀಯ ಕ್ರೀಡಾ ದಿನ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶಾಲೆಯ ಪ್ರಾಚಾರ್ಯ ವಿಕ್ರಂ ನಾರ್ವೆಕರ, ಮೇಜರ್ ಧ್ಯಾನ ಚಂದ ಅವರು ಪ್ರಸಿದ್ಧ ಹಾಕಿ ಆಟಗಾರರಾಗಿದ್ದರು. ಅವರ ಗೌರವಾರ್ಥವಾಗಿ ಭಾರತದಲ್ಲಿ ಆಗಸ್ಟ್ 29 ರಾಷ್ಟ್ರೀಯ ಕ್ರೀಡಾ ದಿನವಾಗಿ ಆಚರಿಸಲಾಗುತ್ತದೆ. ಎಲ್ಲರೂ ಅವರಿಂದ ಸ್ಫೂರ್ತಿ ಪಡೆದು ಎಲ್ಲರೂ ಕ್ರೀಡೆಗಳಲ್ಲಿ ತಮ್ಮ ಛಾಪು ಮೂಡಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಹಿರಿಯ ಸಂಯೋಜಕಿ ಜಯಾ ಗಲಗಲಿ, ದೈಹಿಕ ಶಿಕ್ಷಕ ಕಿರಣ ಮುಳ್ಳೂರ, ಬೋಧಕ ಮತ್ತು ಬೋಧಕರ ಹೊರತಾದ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಪ್ರಧಾನಿ ಮೋದಿ ಸಮ್ಮುಖದಲ್ಲಿ ಶಿಫಾ ಜಮಾದಾರ ವಿಚಾರ ಮಂಡನೆ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ವಿಕಸಿತ ಭಾರತ್ ಯುವ ಸಂಪರ್ಕ ಹಾಗೂ ರಾಷ್ಟ್ರೀಯ ಕ್ರೀಡಾ ದಿನದ ಅಂಗವಾಗಿ ಖೇಲೋ ಇಂಡಿಯಾ ಸಂವಾದ – ಖೇಲ್ ಕಿ ಬಾತ್ ಪಿಎಂ ಮೋದಿ ಕೆ ಸಾಥ್ ಸಂವಾದ ಕಾರ್ಯಕ್ರಮದಲ್ಲಿ ವಿಜಯಪುರದ ಮೂಲದ

ಶಿಫಾ ಜಮಾದಾರ ಅನೇಕ ಮಹತ್ವದ ವಿಚಾರಗಳನ್ನು ಪ್ರಧಾನಿ ಮೋದಿ ಅವರ ಸಮ್ಮುಖದಲ್ಲಿ ಹಂಚಿಕೊಂಡಿದ್ದಾರೆ.

ಭುವನೇಶ್ವರದ ಐಐಟಿಯಲ್ಲಿ ನಡೆದ ಸಂವಾದ ಬಿತ್ತರ ಕಾರ್ಯಕ್ರಮದಲ್ಲಿ ಸಂವಾದಕ್ಕೆ ಆಯ್ಕೆಯಾಗಿ ತಮ್ಮ ವಿಷಯವನ್ನು ಮಂಡಿಸಿದರು.

ಗ್ರಾಮೀಣ ಭಾಗ ಕ್ರೀಡಾ ಪ್ರತಿಭೆಗಳ ಆಗರವಾಗಿದೆ, ಹೀಗಾಗಿ ಬಾಲ್ಯದಲ್ಲಿಯೇ ಈ ಗ್ರಾಮೀಣ ಪ್ರತಿಭೆಗಳಿಗೆ ಪೂರಕವಾದ ಪ್ರೋತ್ಸಾಹ, ಅವಕಾಶ, ತರಬೇತಿ ನೀಡಿದರೆ ಈ ಪ್ರತಿಭೆಗಳು ಕ್ರೀಡೆಯಲ್ಲಿ ಬೆಳಗಲು ಸಾಧ್ಯ, ಆ ಮೂಲಕ 2030 ರಲ್ಲಿ ನಮ್ಮ ಹೆಮ್ಮೆಯ ಭಾರತ ವಿಕಸಿತ ಕ್ರೀಡಾ ರಾಷ್ಟವಾಗಿ ಮಿಂಚಲಿದೆ ಎಂದು ಹೇಳಿದರು.

ಶಾಲಾ ಮಟ್ಟದಲ್ಲಿಯೇ ಹೆಚ್ಚಿನ ಕ್ರೀಡಾಕೂಟ ಆಯೋಜನೆಗೆ ಒತ್ತು ನೀಡುವ ಜೊತೆಗೆ ಅನುದಾನದ ಬಲ ಸಹ ನೀಡಬೇಕು ಎಂಬ ಅನೇಕ ವಿಷಯಗಳನ್ನು ಹಂಚಿಕೊಂಡರು.

ಈ ಹಿಂದೆ ರಷ್ಯಾ ರಾಜಧಾನಿ ಮಾಸ್ಕೋದಲ್ಲಿ ನಡೆದ ವಿಶ್ವ ಶೃಂಗ ಸಭೆಯಲ್ಲಿ ಭಾರತದ ಪ್ರತಿನಿಧಿಯಾಗಿ ಶಿಫಾ ಭಾಗವಹಿಸಿದ್ದರು.

ನಂತರ ಶಿಫಾ ಜಮಾದಾರ ಅವರನ್ನು ಒಲಂಪಿಕ್ಸ್ ಆಟಗಾರ್ತಿ ಧ್ಯುತಿ ಚಾಂದ್, ಕೇಂದ್ರ ಕ್ರೀಡಾ ಸಚಿವಾಲಯದ ಪ್ರಾದೇಶಿಕ ನಿರ್ದೇಶಕ ಅಜೀತ್ ಕುಶವಾಹ್ ಮೊದಲಾದವರು ಪ್ರಮಾಣ ಪತ್ರ ನೀಡಿ ಸನ್ಮಾನಿಸಿದರು.

## ಬ್ರಹ್ಮಕುಮಾರಿ ಈಶ್ವರಿಯ ವಿವಿಯಿಂದ ಸಚಿವರಿಗೆ ರಾಖಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಪವಿತ್ರ ರಕ್ಷಾ ಬಂಧನ ಹಬ್ಬದ ಅಂಗವಾಗಿ

ನಗರದ ಬ್ರಹ್ಮಕುಮಾರಿ ಈಶ್ವರಿಯ ವಿಶ್ವ ವಿದ್ಯಾಲಯದ ಸರೋಜಾ ಅಕ್ಕ ಮತ್ತು ರುಕ್ಮಿಣಿ ಅಕ್ಕ ಅವರುಗಳು ಶನಿವಾರ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರಿಗೆ ಪ್ರೀತಿಯಿಂದ ರಾಖಿ ಕಟ್ಟಿ ಶುಭ ಕೋರಿದರು.

ನಗರದಲ್ಲಿರುವ ಸಚಿವ ಗೃಹ ಕಚೇರಿಗೆ ಆಗಮಿಸಿದ ಅವರು, ರಾಖಿ ಕಟ್ಟಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಈ ಪವಿತ್ರ ಬಂಧನದ ತೋರಿದ ಆತ್ಮೀಯತೆ, ಆಶೀರ್ವಾದ ಮತ್ತು ಸಹೋದರತ್ವದ ಭಾವನೆ ಮನಸ್ಸಿಗೆ ಸಂತಸ ತರಿಸಿತು. ಎಲ್ಲರಿಗೂ ಶುಭವಾಗಲಿ. ನಾಡಿನಾದ್ಯಂತ ಉತ್ತಮ ಮಳೆ, ಬೆಳೆ ಸಮೃದ್ಧಿಯಿಂದ ಕೂಡಿರಲಿ ಎಂದು ಶುಭ ಹಾರೈಸಿದರು.

## ರಾಖಿ ಹಬ್ಬದ ಆಚರಣೆ ಸ್ವಾಭಿಮಾನದ ರಕ್ಷಣೆ : ಪಾಟೀಲ



■ ಉದಯರಶ್ಮಿ ದಿನಪತ್ರಿಕೆ

ಕೆಂಭಾವಿ: ಪರಸ್ಪರ ಸಹಕಾರ, ಸಹಬಾಳ್ವೆ, ಸೌಹಾರ್ದತೆ, ಸಹೋದರತ್ವದ ಪರಿಕಲ್ಪನೆಯ ರಕ್ಷಾ ಬಂಧನ ಹಬ್ಬ, ಸ್ನೇಹಯದ, ಸ್ವಾಭಿಮಾನದ, ಸಂರಕ್ಷಣೆಯ ಸಂಕೇತ ಎಂದು ಯುವ ನಾಯಕ ಆದಿತ್ಯಗೌಡ ಎಸ್ ಪೋಲಿಸ್ ಪಾಟೀಲ್ ಹೇಳಿದರು.

ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಶ್ರೀಗುರು ಕಾಂತೇಶ್ವರ ಜನಕಲ್ಯಾಣ ಸೇವಾ ಪ್ರತಿಷ್ಠಾನ ಹಾಗೂ ವಿವೇಕ ಜಾಗೃತ ಬಳಗ, ಸಹಜ ಸ್ಥಿತಿಯೋಗ ಬಂಧುಗಳು ಶ್ರೀ ರವಿಶಂಕರ ಗುರೂಜಿ ಸತ್ಸಂಗಿಗಳು ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಸಂಜೆ ಹಮ್ಮಿಕೊಂಡಿದ್ದ ಮಾಸಿಕ ಹುಣ್ಣಿಮೆಯ ಶಿವಾನುಭವ ಗೋಷ್ಠಿ ಮತ್ತು ರಕ್ಷಾ ಬಂಧನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ರಕ್ಷಾ ಬಂಧನ ಹಬ್ಬ ಸಾಂಸ್ಕೃತಿಕ ಹಾಗೂ ಸಾಂಪ್ರದಾಯಿಕ ಪರಂಪರೆಯ ಪ್ರತೀಕ ಎಂದವರು, ಭ್ರಾತೃತ್ವದ ಬೆಸುಗೆ, ಆದರ್ಶಗಳ ಅಪ್ಪುಗೆ, ಮಾನವೀಯ ಮೌಲ್ಯಗಳಿಗೆ ಮೇಲ್ಪಂಕ್ತಿ ಹಾಕಿಕೊಟ್ಟ ಪ್ರಾಗೈತಿಹಾಸಿಕ ಹಬ್ಬವೇ ರಕ್ಷಾಬಂಧನ ಎಂದರು.

ಸಾಹಿತಿಗಳಾದ ನಿಂಗನಗೌಡ ದೇಸಾಯಿ ಹಾಗೂ ಶರಣಯ್ಯ ಸ್ವಾಮಿ ಹಿರೇಮಠ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಮಹಿಪಾಲರಡ್ಡಿ ಡಿಗ್ಗಾವಿ, ಮಾಜಿ ಪುರಸಭೆ ಸದಸ್ಯೆ ಉಮಾದೇವಿ ಎಚ್ ಪಾಟೀಲ್ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿ ರಕ್ಷಾ ಬಂಧನ ಹಬ್ಬದ ಐತಿಹಾಸಿಕ ಹಿನ್ನೆಲೆಯ ಮೇಲೆ ಬೆಳಕು ಚೆಲ್ಲಿದರು.

ಚನ್ನಬಸವ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು ಸದ್ಭಕ್ತರಾದ ರಮೇಶ ಸೋನ್ನದ ಹಾಗೂ ಗುಡದಯ್ಯ ದಾವಣಗೆರೆಯವರು ಎಲ್ಲರನ್ನೂ ಒಂದುಗೂಡಿಸುವ ಮೂಲಕ ಪ್ರತಿ ವರ್ಷವೂ ರಕ್ಷಾ ಬಂಧನ ಹಬ್ಬವನ್ನು ಅರ್ಥಪೂರ್ಣವಾಗಿ ಶ್ರೀಮಠದಲ್ಲಿ ಜರುಗುವ ಮಾಸಿಕ ಹುಣ್ಣಿಮೆಯ ಸತ್ಸಂಗದಲ್ಲಿ ಆಚರಿಸಿಕೊಂಡು ಬರುತ್ತಿರುವ ಕಾರ್ಯ ಸ್ತುತ್ಯಾರ್ಹ ಎಂದರು.

ಇದೇ ವೇಳೆ ಅಮರನಾಥ ಯಾತ್ರಾರ್ಥಿಗಳಾದ ಶರಣು ಹುಜರತಿ, ಮಹೇಶ ಹೂಗಾರ, ಅನಿಲ್ ಗುತ್ತೇದಾರ, ವಿಜಯ ಹೆಳವರು, ಭವಾನಿ ಶಂಕರ, ಕೃಷ್ಣಪ್ಪ ಮಲ್ಲಿಬಾವಿ, ಶಿವಕುಮಾರ ಹೆಳವರ, ಮಹಮ್ಮದ್ ಹನೀಫ್ ಇವರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಪ್ರಮುಖರಾದ ಹಳ್ಳೆಪ್ಪಗೌಡ ಪಾಟೀಲ್, ಡಾ ಎ ಜಿ ಹಿರೇಮಠ, ನವೀನ್, ನರಸಿಂಹ ವಡ್ಡೆ, ಶಿವನಂದಯ್ಯ ಸ್ವಾಮಿ, ಚನ್ನಬಸವ, ಎಚ್ ಆರ್ ಬಡಿಗೇರ, ಮಲ್ಲನಗೌಡ ಪಾಟೀಲ್, ಪರಶುರಾಮ ನಾರಾಯಣಕರ್, ಹಣ್ಮಂತ ಶಹಾಪುರ, ವೀರಣ್ಣ ಕಲಿಕೇರಿ, ಇಲಿಯಾಸ್ ಪಟೇಲ್, ಅಭಿಷೇಕ ಪಾಟೀಲ್, ಉಪನ್ಯಾಸಕರಾದ ಲೋಕೇಶ, ಸಣ್ಣ ವೀರೇಶ, ಯಲ್ಲಾಲಿಂಗ, ಸೇರಿದಂತೆ ಅನೇಕರಿದ್ದರು.

ಸಿದ್ದಲಿಂಗಸ್ವಾಮಿ ಚಿಂಚೋಳಿ ಇವರಿಂದ ಸಂಗೀತ ಕಾರ್ಯಕ್ರಮ ಮೂಡಿ ಬಂತು, ಡಾ ಯಂಕನಗೌಡ ಪಾಟೀಲ್ ನಿರೂಪಿಸಿ, ವಂದಿಸಿದರು

## ಜಮಖಂಡಿಯ ಬಿ.ಎಲ್.ಡಿ.ಇ ಶಿಕ್ಷಣ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಕ್ರೀಡಾ ದಿನಾಚರಣೆ

## ಕ್ರೀಡೆ ನಾಯಕತ್ವ, ಆತ್ಮವಿಶ್ವಾಸ ಬೆಳೆಸುವ ಸಾಧನ :ಡಾ.ಕಾಗವಾಡೆ

■ ಉದಯರಶ್ಮಿ ದಿನಪತ್ರಿಕೆ



ಬಾಗಲಕೋಟೆ: ಭಾರತದ ಹಾಕಿ ಮಾಂತ್ರಿಕ, 'ಹಾಕಿ ದಂತಕಥೆ' ಮೇಜರ್ ಧ್ಯಾನಚಂದ್ ಅವರ ಜನ್ಮದಿನದ ಅಂಗವಾಗಿ ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಬಿ.ಎಲ್.ಡಿ.ಇ ಶಿಕ್ಷಣ ಮಹಾವಿದ್ಯಾಲಯ (ಬಿ.ಇಡಿ), ಜಮಖಂಡಿಯಲ್ಲಿ ಶನಿವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಮೇಜರ್ ಧ್ಯಾನಚಂದ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಗೌರವ ನಮನ ಸಲ್ಲಿಸಲಾಯಿತು. ಬಳಿಕ ಪ್ರಶಿಕ್ಷಣಾರ್ಥಿಗಳಿಗಾಗಿ ವಿವಿಧ ಕ್ರೀಡಾ ಚಟುವಟಿಕೆಗಳನ್ನು ಆಯೋಜಿಸಲಾಗಿದ್ದು, ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಕಾಲೇಜಿನ ಪ್ರಾಚಾರ್ಯ ಡಾ. ಆರ್.ಎಸ್. ಕಾಗವಾಡೆ, "ಕ್ರೀಡೆ ವಿದ್ಯಾರ್ಥಿಗಳಲ್ಲಿ ದೈಹಿಕ ಸಾಮರ್ಥ್ಯದ ಜೊತೆಗೆ ಶಿಸ್ತು, ಸಮಯಪಾಲನೆ, ತಂಡದ ಮನೋಭಾವ, ನಾಯಕತ್ವ ಗುಣ ಹಾಗೂ ಸೋಲು-ಗೆಲುವನ್ನು ಸಮಚಿತ್ತದಿಂದ ಸ್ವೀಕರಿಸುವ ಮನೋಭಾವವನ್ನು ಬೆಳೆಸುತ್ತದೆ. ಭವಿಷ್ಯದ ಶಿಕ್ಷಕರಾಗಲಿರುವ ಪ್ರಶಿಕ್ಷಣಾರ್ಥಿಗಳು ಕ್ರೀಡೆಯ ಮಹತ್ವವನ್ನು ಅರಿತು, ತಮ್ಮ ವಿದ್ಯಾರ್ಥಿಗಳಲ್ಲಿಯೂ ಕ್ರೀಡಾಸಕ್ತಿಯನ್ನು ಬೆಳೆಸಬೇಕು" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಪ್ರೊ. ಕೆ.ಜೆ. ಜೀರಗಾಳಿ, ಪ್ರೊ. ಎಲ್.ಎಂ. ಮಾರ್ಕಪನಳ್ಳಿ, ಪ್ರೊ. ಅಶ್ವಿನಿ ಅನಂತಪೂರ, ಪ್ರೊ. ಪ್ರೇಮಾನಂದ ಹಿರೇಮಠ, ದೈಹಿಕ ನಿರ್ದೇಶಕ ಪ್ರೊ. ಮಹಾದೇವ ಗಲಬಿ, ಗ್ರಂಥಪಾಲಕರಾದ ಲಕ್ಷ್ಮೀ ಧರ್ಮಟ್ಟಿ, ವಾಯ್.ಎಸ್. ಕೋರಿ ಸೇರಿದಂತೆ ಕಾಲೇಜಿನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಮತ್ತು ಸರ್ವ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

## ತಂತ್ರಜ್ಞಾನ ಮಿತವಾಗಿ ಬಳಸಿ, ನೈಜ ಸಂಬಂಧಗಳಿಗೆ ಒತ್ತು ನೀಡಿ

■ ಉದಯರಶ್ಮಿ ದಿನಪತ್ರಿಕೆ

**ಬಿ.ಎಲ್.ಡಿ.ಇ ಸಂಸ್ಥೆಯ ನೂತನ ಕಲಾ ಮಹಾವಿದ್ಯಾಲಯ ತಿಕೋಟಾ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ & ಕ್ರೀಡಾ ದಿನಾಚರಣೆ। ಡಾ.ಸುನಿತಾ ಬಿ. ಜಾಧವ ಸಲಹೆ**



ತಿಕೋಟಾ: ಭಾರತದ ಪುರಾತನ ಸಾಮುದಾಯಿಕ ಸಂಸ್ಕೃತಿಯನ್ನು ಇಂದಿನ ಡಿಜಿಟಲ್ ಯುಗವು ಬದಲು ಮಾಡುತ್ತಿರುವುದರ ಇತಿಮಿತಿಗಳನ್ನು ಅಳತೆ ಮಾಡುವುದು ಕಷ್ಟಸಾಧ್ಯ ಎಂದು ಮುದ್ದೇಬಿಹಾಳ ಎಮ್.ಜಿ.ವಿ.ಸಿ ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಸುನಿತಾ ಬಿ. ಜಾಧವ ಹೇಳಿದರು.

ಬಿ. ಎಲ್. ಡಿ. ಇ ಸಂಸ್ಥೆಯ ತಿಕೋಟಾ ಪಟ್ಟಣದ ನೂತನ ಕಲಾ ಮಹಾವಿದ್ಯಾಲಯದಲ್ಲಿ ಶನಿವಾರ ಐಕ್ಯೂಎಸಿ ಹಾಗೂ ಸಮಾಜಶಾಸ್ತ್ರ ವಿಭಾಗದ ವತಿಯಿಂದ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇವತ್ತಿನ ತಂತ್ರಜ್ಞಾನ ತಕ್ಷಣದ ಸಂಪರ್ಕ ಒದಗಿಸಿ ಜಗತ್ತಿನ ಯಾವುದೇ ಮೂಲೆಯಲ್ಲಿರುವವರನ್ನು ಕ್ಷಣಾರ್ಧದಲ್ಲಿ ಸಂಪರ್ಕಿಸಲು ಅನುವು ಮಾಡಿದೆ. ಭೌಗೋಳಿಕ ದೂರವು ಈಗ ಸಂಬಂಧಗಳಿಗೆ ಅಡ್ಡಿಯಾಗಿ ಉಳಿದಿಲ್ಲ. ನಿರಂತರ ವಾಟ್ಸಾಪ್, ಇನ್‌ಸ್ಟಾಗ್ರಾಮ್ ಮೂಲಕ ಸಂಪರ್ಕದಲ್ಲಿರಲು ಸಾಧ್ಯವಾಗಿದೆ. ಸಂಬಂಧಗಳ ಸ್ವರೂಪದಲ್ಲಿ ಮುಖಾಮುಖಿ ಭೇಟಿಯಾಗದಿದ್ದರೂ ಆನ್‌ಲೈನ್‌ನಲ್ಲಿ ಆಪ್ತ ಗೆಳೆಯರಾಗುತ್ತಿದ್ದಾರುವುದು ಒಳ್ಳೆಯ ಬೆಳವಣಿಗೆ. ಸೈಬರ್ ಸಂಸ್ಕೃತಿಯು ಮಾನವ ಸಂಬಂಧಗಳನ್ನು ಹತ್ತಿರ ತಂದಿದ್ದರೂ, ಅವುಗಳ ನಡುವಿನ ಭಾವನಾತ್ಮಕ ಆಳವನ್ನು ಕಡಿಮೆ ಮಾಡಿದೆ. ತಂತ್ರಜ್ಞಾನವನ್ನು ಮಿತವಾಗಿ ಬಳಸಿ, ನೈಜ ಸಂಬಂಧಗಳಿಗೆ ಒತ್ತು ನೀಡುವುದು ಇಂದಿನ ಅಗತ್ಯವಾಗಿದೆ ಎಂದು ಹೇಳಿದರು. ವಿಭಾಗದ ಮುಖ್ಯಸ್ಥ ಡಾ.ಎಂ.ಬಿ.ಹೂಗಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ದೈಹಿಕ ನಿರ್ದೇಶಕ ಬಿ.ಆರ್.ದೇಸಾಯಿ ಮಾಂತ್ರಿಕ ಧ್ಯಾನಚಂದ್ ಅವರ ಕುರಿತು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಪ್ರೊ.ಪಿ.ಎಸ್. ತೋಳನೂರ ವಹಿಸಿದ್ದರು.

ಐಕ್ಯೂಎಸಿ ಸಂಯೋಜಕ ಪ್ರೊ.ಬಿ. ಎಸ್.ಬೆಳಗಲಿ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎಂ.ಬಿ.ಹೂಗಾರ, ಡಾ.ಸುನೀತಾ ಬಿ.ಜಾಧವ, ಇಂಗ್ಲೀಷ ಉಪನ್ಯಾಸಕಿ ಸ್ವಪ್ನಾ ಹಾಲಳ್ಳಿ, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಬಿ.ಆರ್.ದೇಸಾಯಿ, ಪ್ರಾಧ್ಯಾಪಕ ವೃಂದ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪ್ರಿಯಾ ದಡೇಕರ ಸಂಗಡಿಗರು ಪ್ರಾರ್ಥಿಸಿದರು, ವಿದ್ಯಾರ್ಥಿನಿ ತೇಜು ಖೋತ ನಿರೂಪಿಸಿ, ವಂದಿಸಿದರು.

## ಕೂಡಲೇ ಬೆಳೆ ನಷ್ಟ ಪರಿಹಾರ ಬಿಡುಗಡೆಗೆ ರೈತರ ಆಗ್ರಹ

■ ಉದಯರಶ್ಮಿ ದಿನಪತ್ರಿಕೆ



ಅಫ್ಜಲ್‌ಪುರ: ತಾಲೂಕು ಕೇಂದ್ರದಲ್ಲಿ ಸ್ವಾಭಿಮಾನಿ ಕಬ್ಬು ಬೆಳೆಗಾರರ ಐಕ್ಯ ಹೋರಾಟ ಸಮಿತಿ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ತೀವ್ರ ಪ್ರತಿಭಟನೆ ನಡೆಸಲಾಯಿತು. ಕಲಬುರಗಿ ಜಿಲ್ಲೆಯಲ್ಲಿ ಮಳೆ ಕೈಕೊಟ್ಟ ಹಿನ್ನೆಲೆಯಲ್ಲಿ ಇಡೀ ಜಿಲ್ಲೆಯನ್ನು ಸಂಪೂರ್ಣವಾಗಿ 'ಅತೀ ಬರಗಾಲ ಪೀಡಿತ ಪ್ರದೇಶ'ವೆಂದು ಸರ್ಕಾರ ಅಧಿಕೃತವಾಗಿ ಘೋಷಿಸಬೇಕೆಂದು ರೈತರು ಆಗ್ರಹಿಸಿದರು. ಪ್ರತಿಭಟನಾಕಾರರು ಮುಖ್ಯ ರಸ್ತೆಯಲ್ಲಿ ಟೈಯರ್‌ಗೆ ಬೆಂಕಿ ಹಚ್ಚಿ, ರಸ್ತೆ ತಡೆದು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

**ಕಲಬುರಗಿಯನ್ನು ಅತೀ ಬರಗಾಲ ಪೀಡಿತ ಜಿಲ್ಲೆಯೆಂದು ಘೋಷಿಸಲು ಆಗ್ರಹಿಸಿ ಅಫ್ಜಲ್‌ಪುರದಲ್ಲಿ ರಸ್ತೆ ತಡೆ। ಸಿಎಂಗೆ ಮನವಿ**


ಮಳೆ ಇಲ್ಲದೆ ಕಬ್ಬು ಸೇರಿದಂತೆ ಪ್ರಮುಖ ಬೆಳೆಗಳು ಒಣಗಿ ಹೋಗಿದ್ದು, ಅನ್ನದಾತರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಮುಖಂಡರು ಅಳಲು ತೋಡಿಕೊಂಡರು. ಕೂಡಲೇ ಬೆಳೆ ನಷ್ಟ ಪರಿಹಾರ ಬಿಡುಗಡೆ ಮಾಡಬೇಕು ಮತ್ತು ರೈತರ ಸಾಲ ಮನ್ನಾ ಮಾಡಬೇಕೆಂದು ಪಟ್ಟು ಹಿಡಿದರು. ಬಳಿಕ ಸ್ಥಳೀಯ ತಹಸೀಲ್ದಾರ್ ಅವರ ಮೂಲಕ ಮುಖ್ಯಮಂತ್ರಿಗಳಿಗೆ ತಮ್ಮ ಬೇಡಿಕೆಗಳ ಲಿಖಿತ ಮನವಿ ಪತ್ರವನ್ನು ಸಲ್ಲಿಸಲಾಯಿತು.

> "ಮಳೆಯಿಲ್ಲದೆ ಇಂದು ರೈತನ ಹೊಲದಲ್ಲಿ ಬೆಳೆದ ಬೆಳೆಗಳೆಲ್ಲ ಕಣ್ಣೆದುರೇ ಒಣಗಿ ಬೂದಿಯಾಗುತ್ತಿವೆ. ಸಾಲ-ಸೂಲ ಮಾಡಿ ಬಿತ್ತನೆ ಮಾಡಿದ ಅನ್ನದಾತ ಕಂಗಾಲಾಗಿದ್ದು, ಗುಳೆ ಹೋಗುವ ಪರಿಸ್ಥಿತಿ ಬಂದೊದಗಿದೆ. ಸರ್ಕಾರ ಕೇವಲ ಕಾಗದದ ಮೇಲೆ ಸಮೀಕ್ಷೆ ನಡೆಸುವುದನ್ನು ಬಿಟ್ಟು ವಾಸ್ತವ ಸ್ಥಿತಿ ಅರಿತು ಕಲಬುರಗಿಯನ್ನು ತಕ್ಷಣವೇ ಅತೀ ಬರಗಾಲ ಪೀಡಿತ ಜಿಲ್ಲೆ ಎಂದು ಘೋಷಿಸಬೇಕು. ಪ್ರತಿ ಎಕರೆಗೆ ವೈಜ್ಞಾನಿಕ ಪರಿಹಾರ ಒದಗಿಸುವುದರ ಜೊತೆಗೆ ರೈತರ ಕೃಷಿ ಸಾಲವನ್ನು ಸಂಪೂರ್ಣ ಮನ್ನಾ ಮಾಡದಿದ್ದರೆ, ಮುಂದಿನ ದಿನಗಳಲ್ಲಿ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲಾಗುವುದು."
>
> ■ ಶ್ರೀಮಂತ ಬಿರಾದಾರ
> ರೈತ ಮುಖಂಡರು

## ಸಚಿವ ಪಾಟೀಲರಿಗೆ ಸಿದ್ಧೇಶ್ವರ ಶ್ರೀ ಕುರಿತ ಕೃತಿ ನೀಡಿದ ಡಾ. ಚಾಂದಕವಟೆ

### ಸಿದ್ದೇಶ್ವರ ಶ್ರೀಗಳ ಇಂಗ್ಲೀಷ ಪ್ರವಚನಗಳ ಸಂಗ್ರಹದ ಕೃತಿ। 'ರಿಯಲೈಸೇಷನ್ ಆಫ್ ದ ಸೆಲ್ಫ್' ಕೃತಿಯ ಲೇಖಕ ಡಾ. ಎಂ.ಎಸ್.ಚಾಂದಕವಟೆ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ಜ್ಞಾನಯೋಗಿ ಸಿದ್ದೇಶ್ವರ ಶ್ರೀಗಳು ಇಂಗ್ಲಿಷ್‌ನಲ್ಲಿ ಮಾಡಿರುವ ಪ್ರವಚನಗಳ ಸಂಗ್ರಹವಾದ 'ರಿಯಲೈಸೇಷನ್ ಆಫ್ ದ ಸೆಲ್ಫ್' ಪುಸ್ತಕವನ್ನು ಕೃತಿಯ ಲೇಖಕರಾದ ಎಂ.ಎಸ್.ಚಾಂದಕವಟೆ ಅವರು ಕೈಗಾರಿಕೆ, ಮೂಲ ಸೌಲಭ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಸಚಿವರಿಗೆ ಶನಿವಾರ ನಗರದಲ್ಲಿರುವ ಗೃಹ ಕಚೇರಿಯಲ್ಲಿ ನೀಡಿದರು.

ಬೆಂಗಳೂರಿನ ಭಾರತೀಯ ವಿದ್ಯಾಭವನದ ಗಾಂಧಿ ಸೆಂಟರ್ ಆಫ್ ಸಾಯಿನ್ಸ್ ಅ್ಯಂಡ್ ಹ್ಯೂಮನ್ ವ್ಯಾಲ್ಯುಸ್ ಸಂಸ್ಥೆ ಈ ಪುಸ್ತಕವನ್ನು ಪ್ರಕಟಿಸಿದ್ದು, ಆಗಸ್ಟ17ರಂದು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಬಿಡುಗಡೆಯಾಗಿತ್ತು. ಶ್ರೀ ಸಿದ್ದೇಶ್ವರ ಶ್ರೀಗಳ ಪ್ರವಚನಗಳ ಕನ್ನಡ ಪುಸ್ತಕಗಳು ಮತ್ತು ಭಾಷಾಂತರ ಕೃತಿಗಳು ಸಾಕಷ್ಟಿವೆ. ಆದರೆ ಶ್ರೀಗಳು ಇಂಗ್ಲಿಷ್‌ನಲ್ಲಿ ಮಾಡಿರುವ ಪ್ರವಚನಗಳ ಸಂಗ್ರಹ ಬಂದಿರುವುದು ಇದೇ ಮೊದಲು ಎಂದು ಹಿರಿಯ ಲೇಖಕ ಚಾಂದಕವಟೆ ಅವರು ಸಚಿವರಿಗೆ ಇದೇ ವೇಳೆ ವಿವರಿಸಿದರು.

ಶ್ರೀ ಸಿದ್ದೇಶ್ವರ ಶ್ರೀಗಳು ವಿಜಯಪುರ ಜ್ಞಾನಯೋಗಾಶ್ರಮದಲ್ಲಿ ಇದ್ದಾಗ ರವಿವಾರಕ್ಕೊಮ್ಮೆ ಇಂಗ್ಲಿಷ್ ನಲ್ಲಿ ಪ್ರವಚನ ಮಾಡುತ್ತಿದ್ದರು. ತಾವು ಅದನ್ನು ಸಂಗ್ರಹಿಸಿರುವುದಾಗಿ ಹೇಳಿದ ಅವರು, ಶ್ರೀಗಳಿಗೆ ಇಂಗ್ಲಿಷ್ ಭಾಷೆ ಮೇಲೂ ಪ್ರಭುತ್ವ ಇತ್ತು. ದೇಶ, ಅಂತಾರಾಷ್ಟ್ರೀಯ ಮಟ್ಟದಲ್ಲೂ ಶ್ರೀಗಳ ವಿಚಾರಗಳನ್ನು ಪ್ರಚಾರ ಮಾಡಲು ಇಂಥ ಕೃತಿಗಳ ಅಗತ್ಯವಿರುವುದಾಗಿ ಮನಗಂಡು ಅಭಿಮಾನದಿಂದ ಈ ಕೆಲಸ ಮಾಡಿರುವುದಾಗಿ ಹೇಳಿದರು.

ಇದಲ್ಲದೆ ಆಯ್ದ ಪ್ರವಚನಗಳ 'ಸಾಧಕರ ಜೀವನ ಪ್ರಸಂಗಗಳು' ಹಾಗೂ ಬುದ್ಧನ ಕುರಿತು ಶ್ರೀಗಳು ಹೇಳಿರುವ ವಿಷಯದ 'ಬುದ್ಧನ ನೆನಹುಗಳು' ಪುಸ್ತಕಗಳನ್ನು ಕೂಡ ಚಾಂದಕವಟೆ ಅವರು ಸಚಿವರಿಗೆ ನೀಡಿದರು.

ಸಂತಸದಿಂದ ಕೃತಿ ಸ್ವೀಕರಿಸಿದ ಸಚಿವರು ಲೇಖಕರಿಗೆ ಅಭಿನಂದನೆ ಸಲ್ಲಿಸಿದರು.

ಲೇಖಕರು ಇನ್ನೊಂದು ಇಂಗ್ಲಿಷ್ ಕೃತಿ ರಚಿಸುತ್ತಿದ್ದು, ಅದು ಕೂಡ ಪೂರ್ಣಗೊಂಡ ಬಳಿಕ ಪ್ರಕಟಣೆಯಾಗಲಿದೆ.

ಈ ಸಂದರ್ಭದಲ್ಲಿ ಶಾಸಕ ವಿಠ್ಠಲ ಧೋ. ಕಟಕದೊಂಡ, ಖಾದಿ ಮತ್ತು ಗ್ರಾಮೋದ್ಯೋಗ ಅಧ್ಯಕ್ಷ ಬಾಪುಗೌಡ ಪಾಟೀಲ ಶೇಗುಣಸಿ ಮುಂತಾದವರು ಉಪಸ್ಥಿತರಿದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR